# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000

HAMPI TIMES E-PAPER READERS



94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 20 Issue: 20 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 13.07.2024 13.07.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2


## ನಿತ್ಯ ಪಂಚಾಂಗ

ಮಾಸ: ಆಷಾಢ । ಸಂವತ್ಸರ: ಕ್ರೋಧಿ

**13–07–2024 – ಶನಿವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ಶಿವ |
| ಕರಣ | : ವಾಣಿಜ |
| ಸೂರ್ಯೋದಯ | : 05:50:42 |
| ಸೂರ್ಯಾಸ್ತ | : 19:14:41 |
| ರಾಹು | : 09:12–10:52 |
| ಯಮಘಂಡ | : 14:13–15:54 |
| ಗುಳಿಕ | : 05:51–07:31 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 12–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1605.28 ಅಡಿ |
| ಒಳ ಹರಿವು | 21643 ಕ್ಯುಸೆಕ್ |
| ಹೊರ ಹರಿವು | 205 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 29.161 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1584.32 ಅಡಿ |
| ಒಳ ಹರಿವು | 17383 ಕ್ಯುಸೆಕ್ |
| ಹೊರ ಹರಿವು | 266 ಕ್ಯುಸೆಕ್ |
| ಸಾಮರ್ಥ್ಯ | 6.891 ಟಿಎಂಸಿ |

# ನಮ್ಮ ವಾರ್ಡಿನ ನಾಯಿಗಳನ್ನ ಹಿಡಿಯಿರಿ

## ಬೀದಿನಾಯಿಗಳ ಹಾವಳಿ ತಡೆಗೆ 19 ಲಕ್ಷ ರೂ ಖರ್ಚು । ಹುಟ್ಟು ನಾಯಿಗಳ ಸಂಖ್ಯೆಯೂ ಅಧಿಕ

## ನಗರ ಸ್ವಚ್ಚತೆಯಲ್ಲಿ ಪರಿಸರ ಇಂಜಿನೀಯರ ನಿರ್ಲಕ್ಷ್ಯಕ್ಕೆ ಸದಸ್ಯರು ಗರಂ । ಗಬ್ಬು ನಾರುತ್ತಿವೆ ಚರಂಡಿಗಳು





■ **ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆ ವ್ಯಾಪ್ತಿಯಲ್ಲಿ ನಾಯಿಗಳ ಸಂತಾನಹರಣ ಮತ್ತು ನಿಯಂತ್ರಣಕ್ಕಾಗಿ ವಾರ್ಷಿಕ 19 ಲಕ್ಷ ರೂಗಳನ್ನು ನಗರಸಭೆಯಿಂದ ಖರ್ಚು ಮಾಡಿದ್ದರೂ ನಾಯಿಗಳ ನಿಯಂತ್ರವಾಗಿಲ್ಲ. ಶಾಲಾ ಮಕ್ಕಳು, ಪಾದಾಚಾರಿಗಳು, ಟೂವ್ಹೀಲರ್ ವಾಹನ ಸವಾರರು ಆತಂಕದಲ್ಲೇ ನಿತ್ಯ ಸಂಚರಿಸುವಂತಾಗಿದೆ. ಜನರ ಪ್ರಾಣಕ್ಕೆ ಅಪಾಯ ಎದುರಾಗುವ ಮುನ್ನ ಅಧಿಕಾರಿಗಳು ಎಚ್ಚೆತ್ತುಕೊಂಡು ನಾಯಿಗಳ ಹಾವಳಿಯನ್ನು ತಡೆಯಬೇಕು ಎಂದು ನಗರಸಭೆ ಸದಸ್ಯರು ಒಕ್ಕೊರಳ ಧ್ವನಿಯಿಂದ ಅಧಿಕಾರಿಗಳಿಗೆ ಆಗ್ರಹಿಸಿದರು.

ನಗರಸಭೆಯ ಸಭಾಂಗಣದಲ್ಲಿ ಶುಕ್ರವಾರ ನಗರಸಭೆ ಅಧ್ಯಕ್ಷೆ ಎ.ಲತಾ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯಲ್ಲಿ ಬೀದಿನಾಯಿಗಳ ಹಾವಳಿ ತಡೆಗೆ ಸದಸ್ಯ ರೂಪೇಶ ಕುಮಾರ ಧ್ವನಿಗೆ ಇತರ ಸದಸ್ಯರು ಧ್ವನಿಗೂಡಿಸಿದರು. ಪೌರಾಯುಕ್ತ ಮನೋಹರ ಪ್ರತಿಕ್ರಿಯಿಸಿ, ಶೀಘ್ರದಲ್ಲೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ನಾಯಿ ಹಾವಳಿ ತಡೆಗೆ ಕ್ರಮಕೈಗೊಳ್ಳಲಾಗುವುದು ಎಂದರು.

ವಾರ್ಡ್‌ಗಳಲ್ಲಿ ಚರಂಡಿಗಳು ಹೂಳು ತುಂಬಿವೆ. ನಿತ್ಯ ವಾರ್ಡ್‌ಗಳಲ್ಲಿ ಸಂಚರಿಸುವಾಗ ಜನರ ಪ್ರಶ್ನೆಗೆ ಉತ್ತರಿಸದಂತಾಗಿದೆ. ಪರಿಸರ ಅಭಿಯಂತರರಾದ ಆರತಿಯವರು ಫೋನ್ ರಿಸೀವ್ ಮಾಡಲ್ಲ. ಯಾರಿಗೆ ಹೇಳ್ಬೇಕು ಸರ್ ನಾವು, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸದಸ್ಯ ಎಚ್.ರಾಘವೇಂದ್ರ ಆಗ್ರಹಿಸಿದರು.

ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸದಸ್ಯರ ಫೋನ್ ರಿಸೀವ್ ಮಾಡಬೇಕು. ಅಧಿಕಾರಿಗಳಿಗೆ ನಗರಸಭೆಯ 35 ಸದಸ್ಯರಾದರೆ, ಪ್ರತಿ ಸದಸ್ಯರು ಸಾವಿರಾರು ಜನರ ಪ್ರಶ್ನೆಗಳಿಗೆ ಉತ್ತರಸಬೇಕಿರುತ್ತದೆ. ಸದಸ್ಯರ ತೀರ್ಮಾನದಂತೆ ಈ ಬಾರಿ ಪರಿಸರ ಇಂಜಿನೀಯರ್‌ಎ ಎಚ್ಚರಿಕೆ ನೀಡಲಾಗಿದೆ ಎಂದರು. ಸದಸ್ಯ ಅಬ್ದುಲ್ ಖದೀರ್ ಮಧ್ಯಪ್ರವೇಶಿಸಿ, ಅಧಿಕಾರಿಗಳಿಗೆ ನೋಟೀಸ್ ನೀಡುವ ಕಾರ್ಯ ಮೇಲಾಧಿಕಾರಿಗಳಿಂದಾಗಿಲ್ಲ. ನೋಟೀಸ್ ನೀಡದೇ ಸಾಮಾನ್ಯ ಸಭೆಯ ವಿಷಯಕ್ಕೆ ತಂದಿರುವುದು ಸರಿಯಲ್ಲ ಎಂದರು.

ಜಿಲ್ಲಾ ಕೇಂದ್ರವಾಗಿರವ ನಗರದಲ್ಲಿ ವಿವಿಧ ಇಲಾಖೆಗಳ ನಾಮಫಲಕ ಮತ್ತು ಮಾರ್ಗಸೂಚಿಗಳು ಇಲ್ಲದಿರುವುದರಿಂದ ಜನರು ಕಚೇರಿಗಳ ಹುಡುಕಾಟದಲ್ಲೆ ಸಮಯ ಹಾಳಾಗುತ್ತಿದೆ. ಸರ್ಕಾರಿ ವಿವಿಧ ಇಲಾಖೆಗಳ ನಾಮಫಲಕಗಳನ್ನು ಮುಖ್ಯ ರಸ್ತೆಗಳಲ್ಲಿ ಅಳವಡಿಸಬೇಕು ಎಂದರು ಸದಸ್ಯರು ಆಗ್ರಹಿಸಿದರು.

ನಗರದ ಸಾಯಿಬಾಬ ದೇವಸ್ಥಾನದಿಂದ ಟಿಬಿ ಡ್ಯಾಂ ವರೆಗೆ ಅಭೇರಾಜ್ ಬಲ್ಡೋಟಾ ರಸ್ತೆ ಎಂದು ನಾಮಕರಣ ಮಾಡಿ, ಬೋರ್ಡ್ ಹಾಕಿಕೊಂಡಿದ್ದಾರೆ. ರಸ್ತೆ ನಿರ್ವಹಣೆ ಇಲ್ಲದದ್ದರಿಂದ ಅವರ ಬೋರ್ಡ್‌ನ್ನು ತೆರವುಗೊಳಿಸಬೇಕು. ನಗರದ 16ನೇ ವಾರ್ಡ್‌ನಲ್ಲಿರುವ ಕುರಿ–ಮಾಂಸ ಮಾರುಕಟ್ಟೆಯನ್ನು ನವೀಕರಣಗೊಳಿಸಬೇಕು ಎಂದು ಸದಸ್ಯರು ಆಗ್ರಹಿಸಿದರು.

ಸದಸ್ಯೆ ರೋಹಿಣಿ ವೆಂಕಟೇಶ ಮಾತನಾಡಿ, ನಗರಸಭೆ ವ್ಯಾಪ್ತಿಯಲ್ಲಿ ತಲೆ ಎತ್ತಿರುವ ವಿವಿಧ ಖಾಸಗಿ, ಅನುದಾನಿತ ಶಾಲೆಗಳು, ಕಲ್ಯಾಣ ಮಂಟಪಗಳು, ಚಿತ್ರಮಂದಿರಗಳಿಂದ ನಗರದ ಅಭಿವೃದ್ಧಿಗಾಗಿ ತೆರಿಗೆ ಸಂಗ್ರಹ ಮಾಡಬೇಕು ಎಂದು ಆಗ್ರಹಿಸಿದರು. ಪೌರಾಯುಕ್ತರು ವಿಷಯವನ್ನು ಪರಿಗಣಿಸಲಾಗಿದ್ದು, ಅಗತ್ಯ ಕ್ರಮವಹಿಸಲಾಗುವುದು ಎಂದರು. ನಗರಸಭೆ ಉಪಾಧ್ಯಕ್ಷ ಶೆಕ್ಷಾವಲಿ, ಸ್ಥಾಯಿ ಸಮಿತಿ ಅಧ್ಯಕ್ಷ ಸಂತೋಷ ಉಪಸ್ಥಿತರಿದ್ದರು.

**ವಿಜಯನಗರ ಜಿಲ್ಲೆಯಲ್ಲಿ ಕಳ್ಳತನ ತಡೆಯುವಲ್ಲಿ ಮತ್ತು ಕಳುವಾಗಿದ್ದ ಚಿನ್ನಾಭರಣ,. ನಗದನ್ನು ಕಳ್ಳರಿಂದ ವಶಕ್ಕೆ ಪಡೆದು ವಾರಸುದಾರರಿಗೆ ಹಿಂತಿರುಗಿಸಿರುವ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಮತ್ತು ಸಿಬ್ಬಂದಿಗಳನ್ನು ಹಾಗೂ ಸೈಕಲ್ ಏರಿ ಜನರ ಮನೆ ಬಾಗಿಲಿಗೆ ತೆರಳಿ ಜನರ ಅಹವಾಲು ಆಲಿಸಿ ಸಮಸ್ಯೆಗಳನ್ನು ಬಗೆ ಹರಿಸುತ್ತಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಕಾರ್ಯ ಶ್ಲಾಘನೀಯ ಮತ್ತು ಫಾರಂ ತ್ರಿ ಸಮಸ್ಯೆ ನಿವಾರಿಸಿದ ಯೋಜನಾ ಅಧಿಕಾರಿ ಎನ್.ಮನೋಹರ ಅವರನ್ನು ಸನ್ಮಾನಿಸಬೇಕು ಎಂದು ಸಭೆ ತೀರ್ಮಾನಿಸಿತು.**

# ಶ್ರೀರಾಮುಲು ಪಾರ್ಕಿನಲ್ಲಿ ಕರಡಿ ವಾಕಿಂಗ್

## ನಗರದಲ್ಲಿ ಸ್ವಚ್ಛತೆ ನಿರ್ಲಕ್ಷ್ಯದಿಂದ ನಾಡಿಗೆ ಪ್ರಾಣಿಗಳು


## ಸ್ಮಶಾನದಲ್ಲಿ ದೀಪದ ಎಣ್ಣೆ, ನೈವೈದ್ಯ ಅರಸಿ ಬರುತ್ತಿರುವ ಪ್ರಾಣಿಗಳು

## ಪ್ರಾಣಿಗಳ ತಾಣವಾಗುತ್ತಿರುವ ಚರಂಡಿ ನೀರಿರುವ ಕಾಲುವೆಗಳು

■ **ಹಂಪಿ ಟೈಮ್ಸ್ ಹೊಸಪೇಟೆ**

ಮಾಜಿ ಸಚಿವ ಆನಂದಸಿಂಗ್ ಮನೆ ಪಕ್ಕದಲ್ಲಿ ಹಾದುಹೋಗಿರುವ ಬೈಪಾಸ್ ಮುಖ್ಯರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ 4 ಗಂಟೆ ಸುಮಾರಿಗೆ ನಡುರಸ್ತೆಯಲ್ಲೆ ಆರು ವರ್ಷದ ಹೆಣ್ಣು ಕರಡಿಯೊಂದು ರಾಜ ಗಾಂಭೀರ್ಯವಾಗಿ ನಡೆದಾಡುತ್ತಾ, ಶ್ರೀರಾಮುಲು ಪಾರ್ಕಿಂಗ್‌ನಲ್ಲಿ ವಾಕಿಂಗ್ ಮಾಡಿ, ಅಲ್ಲಿಯ ಕಾಂಪೌಡ್ ಗೋಡೆ ಏರಿ ಕೆಲವೊತ್ತು ಮಲಗಿದೆ. ಜನರ ಚೀರಾಟ, ಕೂಗಾಟಕ್ಕೆ ಅಲ್ಲಿಂದ ಕಾಲ್ಕಿತ್ತ ಕರಡಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯದ ಆವರಣದಲ್ಲಿನ ಗಿಡಗಂಟಿಗಳಲ್ಲಿ ಅಡಗಿ ಕೂತಿತ್ತು. ಅರಣ್ಯ ಇಲಾಖೆ ಸಿಬ್ಬಂದಿಗಳು ಕರಡಿಗೆ ಬಲೆಹಾಕಿ, ಎರಡು ಬಾರಿ ಅರವಳಿಕೆ ನೀಡಿ, ಕರಡಿಯನ್ನು ಸೆರೆಹಿಡಿದು ಹಂಪಿ ಜ್ಯೂಗೆ ಬಿಟ್ಟು, ಜನರ ಆತಂಕವನ್ನು ತಾತ್ಕಾಲಿಕವಾಗಿ ದೂರಾಗಿಸಿದ್ದಾರೆ. ಕರಡಿ ಸೆರೆಹಿಡಿಯುವ ಕಾರ್ಯಚರಣೆಯಲ್ಲಿ ಉಪ ಅರಣ್ಯವಲಯಧಿಕಾರಿ ಭರತ್‌ರಾಜ್ ಸಿಬ್ಬಂದಿಗಳಾದ ನಾಗರಾಜ, ಭರಮಪ್ಪ, ಯಂಕಪ್ಪ ಇತರರಿದ್ದರು.

ಕರಡಿಯನ್ನು ನೋಡಿದ ಸ್ಥಳೀಯರು ತಮ್ಮ ಮೊಬೈಲ್‌ನಲ್ಲಿ ದೃಶ್ಯಗಳನ್ನು ಸೆರೆಹಿಡಿದಿರುವುದು ಕರಡಿ ಪತ್ತೆಗೆ ಸಹಕಾರಿಯಾಗಿದೆ. ಆ ಕರಡಿ ಮಾಜಿ ಸಚಿವ ಸಿಂಗ್ ಮನೆಯ ಹಿಂಭಾಗದಿಂದ ಶ್ರೀರಾಮಲು ಪಾರ್ಕ್‌ನೊಳಗೆ ನುಗ್ಗಿ, ವಾಕಿಂಗ್ ಮಾಡುವ ದೃಶ್ಯಗಳನ್ನು ಜನರು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದಿದ್ದಾರೆ. ರಾಣಿಪೇಟೆಯ ಜನವಸತಿ ಪ್ರದೇಶದ ಇಕ್ಕಟ್ಟಿನ ಓಣಿ ರಸ್ತೆಯಲ್ಲಿ ರಾತ್ರಿ ನಡೆದಾಡುತ್ತಿರುವುದನ್ನು ಕಂಡು ಜನರು ಕೂಗಿ, ಚೀರಿಕೊಂಡು ಗಾಬರಿಯಾಗಿದ್ದಾರೆ. ಕೊನೆಗೆ ಕರಡಿ ಸೆರೆಯಿಂದ ಜನರು ನಿಟ್ಟುಸುರಿ ಬಿಟ್ಟಿದ್ದು, ರಾತ್ರಿವೇಳೆ ಏಕಾಂಗಿಯಾಗಿ ಜನರು ಓಡಾಡಲು ಭಯಬೀತರಾಗಿದ್ದಾರೆ.



ಕರಡಿ ಇಲ್ಲಿಗೇಕೆ ಬಂದಿರಬಹುದು? ಎನ್ನುವ ಪ್ರಶ್ನೆಗಳನ್ನು ಜನರನ್ನು ಕಾಡಲಾರಂಭಿಸಿದ್ದು, ಭಟ್ರಹಳ್ಳಿ ಆಂಜಿನೇಯ ದೇವಸ್ಥಾನದ ಸಮೀಪ ರುದ್ರಭೂಮಿಯೊಂದಿದೆ. ಆ ರುದ್ರಭೂಮಿಯಲ್ಲಿ ಮೃತರ ಆತ್ಮಶಾಂತಿಗಾಗಿ ಮೃತರ ಸಂಬಂಧಿಗಳು ಇಡುವ ನೈವೈದ್ಯೆ, ಎಣ್ಣೆ ತಿನ್ನಲು ಕರಡಿ ಬಂದಿರುವ ಸಾಧ್ಯತೆಗಳಿವೆ. ಅಲ್ಲದೆ ಕಾಲುವೆಯಲ್ಲಿ ಹರಿಯುವ ಚರಂಡಿ ನೀರು ಮತ್ತು ಜನರ ಸಂಚಾರವಿರದ ಆ ಸ್ಥಳದಲ್ಲಿ ಕರಡಿ ವಾಸಕ್ಕೆ ಯೋಗ್ಯವೆನಿಸರಬಹುದು ಎಂದು ಹೇಳಲಾಗುತ್ತಿದೆ. ನಗರಸಭೆಯವರು ನಗರದಲ್ಲಿ ಸ್ವಚ್ಛತೆಗೆ ಆಧ್ಯತೆ ನೀಡಿದರೆ ಇಂತಹ ಘಟನೆಗಳು ಮರಕಳಿಸುವುದಿಲ್ಲ ಎನ್ನುವ ಮಾತುಗಳು ದಟ್ಟವಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಜನರ ಪ್ರಾಣ ರಕ್ಷಣೆಗೆ ಸೂಕ್ತ ಕ್ರಮವಹಿಸಬೇಕು ಎನ್ನುವುದು ಜನರ ಒತ್ತಾಯವಾಗಿದೆ.



# ನಾಳೆ ಸಿಟಿ ಆಸ್ಪತ್ರೆಯಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಸಿಟಿ ಆಸ್ಪತ್ರೆಯಲ್ಲಿ ಹುಬ್ಬಳ್ಳಿಯ ಹೆಚ್‌ಸಿಜಿ ಎನ್‌ಎಂಆರ್ ಕ್ಯಾನ್ಸರ್ ಸೆಂಟರ್, ಕೆ.ಎಸ್.ಸಿ.ಎ.ಎಸ್.ಐ ವಿಜಯನಗರ ಶಾಖೆ ಹಾಘೂ ಹೊಸಪೇಟೆಯ ಐಎಂಎ ಸಹಯೋಗದಲ್ಲಿ ಜು.14 ರಂದು ಭಾನುವಾರ ಬಎಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಉಚಿತ ಕ್ಯಾನ್ಸರ್ ತಪಾಸಣೆ ಹಮ್ಮಿಕೊಳ್ಳಲಾಗಿದೆ ಎಂದು ಐಎಂಎ ತಿಳಿಸಿದೆ.

ಸ್ತನಕ್ಯಾನ್ಸರ್ ತಪಾಸಣೆ, ಗರ್ಭಕೋಶದ ತಪಾಸಣೆ, ಪ್ಲ್ಯಾಪ್ ಸ್ಮೀಯರ್, ಎಲ್ಲಾ ತರಹದ ಕ್ಯಾನ್ಸರ್ ಕುರಿತು ತಜ್ಞವೈದ್ಯರಿಂದ ಮಾಹಿತಿನೀಡಲಾಗುವುದು.ಮಹಿಳೆಯರಲ್ಲಿ ಬಿಳಿಮುಟ್ಟಿನ ತೊಂದರೆ, ಅತಿಯಾದ ಕೆಂಪು ಮುಟ್ಟು, ಸ್ತನಗಳಲ್ಲಿ ನೋವು/ಗಡ್ಡೆ/ ಗಾಯ, ಬಹಳ ದಿನಗಳಿಂದ ಮೈಯಲ್ಲಿ ಮಾಯದ ಗಡ್ಡೆ, ಕೆಮ್ಮು, ಕಫದಲ್ಲಿ ರಕ್ತ ಕಾಣಿಸಿಕೊಳ್ಳುವುದು, ಬಲಹೀನತೆಗೆ ಒಳಗಾಗಿರುವುದು, ವಿವರಿಸಲಾಗದ ತೂಕದ ನಷ್ಟ, ಕೈಕಾಲು ಉತುವಿಕೆ, ತಿನ್ನಲು, ನುಂಗಲು, ತೊಂದರೆ ಅನುಭವಿಸುವುದು, ವಾಂತಿಯಲ್ಲಿ ರಕ್ತ , ಬಾಯಿಯಲ್ಲಿ ಗಾಯ, ಕುತ್ತಿಗೆಯಲ್ಲಿ ಗಡ್ಡೆ, ಚರ್ಮದ ಮೇಲೆ ಕಪ್ಪು ಕಲೆಗಳ ಬದಲಾವಣೆಯಾಗುವುದು ಕಂಡುಬಂದ ತಕ್ಷಣವೆ ವೈದ್ಯರನ್ನು ಸಂಪರ್ಕಿಸಿ ಆರಂಭದಲ್ಲೆ ಚಿಕಿತ್ಸೆ ಪಡೆದು ಗುಣರಾಗಬೇಕು ಹೆಚ್ಚಿನ ಮಾಹಿತಿಗೆ 7795889349, 6361348933 ಎಂದು ಹೊಸಪೇಟೆ ಐಎಂಎ ತಿಳಿಸಿದೆ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

SCAN & READ E-PAPER

SSLC HINDI Hampi Times Margadarshi 2024-25

## कविता : मातृभूमि

**I अनुरूपता :**

1) पताका : न्याय का प्रतीक :: दीप : ------------ **(ज्ञान का प्रतीक)**

2) हस्त : हाथ :: पताका: ------- **( झंडा )**

3) बायें हाथ में : न्याय का पताका :: दाहिने हाथ में : ----- ( **ज्ञान का दीप** )

4) अभिनव मनुष्य : रामधारीसिंह दिनकर :: मातृभूमि : ------- ( **भगवतीचरण वर्मा** )

5) वसीयत : नाटक :: चित्रलेखा : ------ ( **उपन्यास** )

**II एक वाक्य में उत्तर लिखिए ।**

6) भारत के खेत कैसे हैं ? ( 2019 )
भारत के खेत **हरे-भरे और सुहाने** है |

7)कवि भारत माता से क्या निवेदन कर रहे है?
कवि भारत माता से **जग का रूप बदलने के लिए** निवेदन कर रहे हैं | (2020)

8)भारत भूमि के अंदर क्या-क्या भरा हुआ है ?
भारत भूमि के अंदर **अपार खनिजो का व्यापक धन** भरा हुआ है |

9) सुख- संपत्ति, धन- धाम को माँ कैसे बाँट रही है ?
सुख- संपत्ति, धन- धाम को माँ **मुक्त हस्त से** बाँट रही है |

10)'जय हिन्द ' का नाद कहाँ- कहाँ पर गूँजना चाहिए ?
'जय हिन्द ' का नाद **सकल नगर और ग्रामो** पर गूँजना चाहिए |

11) आज भारत माँ के साथ कौन है ?
आज भारत माँ के साथ **कोटि - कोटि भारतीय लोग हैं ।**

Hampi Times Margadarshi

**III दो - तीन वाक्यो में उत्तर लिखिए ।**

**12) भारत माँ के प्रकृति - सौंदर्य का वर्णन कीजिए | ( 2018, 2020, 2022 2023)**

* भारत माँ के खेत हरे - भरे और सुहाने हैं ।
* भारत के अनेक वन उपवन फल-फूलों से लदे हुए हैं ।
* भारत की धरती के अंदर अपार खनिज संपदा भरा हुआ है ।
* भारत माता सुख- संपत्ति धन- धाम को मुक्त हस्थ से सभी भारतीयो को बाँट रही है |

**13) मातृभूमि का स्वरूप कैसे सुशोभित है ? (2019)**

* मातृभमि के एक हाथ में न्याय – पताका और दूसरे हाथ में ज्ञान का दीप है ।
* भारत माता के साथ कोटि - कोटि भारतीय लोग हैं ।
* भारत माता अमरों की जननी है ।
* भारत माता के हृदय में गांधी, बुद्ध, और राम जैसे महान विभूतियों ने वास किये हैं ।
* जय हिन्द का नाद सकल नगर और ग्रामो में गूँजना चाहिए |

**14) कवि भारत माता को अमरो की जननी क्यो कहा है ?**

भारत देश में गांधी, बुद्ध, और राम जैसे अनेक महान विभूतियों का जन्म हुआ हैं | इसलिए कवि भारत माता को अमरो की जननी कहा है |

-----------------------------------------------

**ವಿಶೇಷ ಸೂಚನೆ :**

* ವಾರ್ಷಿಕ ಪರೀಕ್ಷೆಯಲ್ಲಿ ಈ ಪದ್ಯದ ಆಧಾರದ ಮೇಲೆ 03 ಅಂಕಗಳಿಗೆ ಪ್ರಶ್ನೆಗಳನ್ನು ಕೇಳಲಾಗುವುದು.
* ಈ ಮೇಲಿನ ಬಹುತೇಕ ಪ್ರಶ್ನೆಗಳು ಹಿಂದಿನ ವಾರ್ಷಿಕ ಪರೀಕ್ಷೆಗಳಲ್ಲಿ ಬಂದಿವೆ.

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ. ಶಿಕ್ಷಕರು ಸರಕಾರಿ ಪ್ರೌಢ.ಶಾಲೆ ಮಗಿಮಾವಿನಹಳ್ಳಿ. ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )


ಸಾಯಿಮಣಿ ಪ್ರಕಾಶನ, ಹೊಸಪೇಟೆ

ಹಂಪಿ ಟೈಮ್ಸ್ HAMPI TIMES

## ವಿಜ್ಞಾನ

# ರಾತ್ರಿಯಲ್ಲಿ ಬೆಕ್ಕಿನ ಕಣ್ಣುಗಳು ಏಕೆ ಹೊಳೆಯುತ್ತವೆ?

■ ಆರ್.ಬಿ.ಗುರುಬಸವರಾಜ

ರಾತ್ರಿ ಊಟದ ನಂತರ ತಂದೆಯ ಜೊತೆ ವಾಕಿಂಗ್ ಮಾಡುತ್ತಿದ್ದ ಮೋನಿ ಕತ್ತಲಲ್ಲಿ ಏನೋ ನೋಡಿ ಚಿಟ್ಟನೇ ಚೀರಿದಳು. ತಂದೆಗೆ ಆಶ್ಚರ್ಯವಾಗಿ "ಏನಾಯ್ತು ಮೋನಿ" ಎಂದು ಗಾಬರಿಗೊಂಡರು. ನಡುಗುತ್ತಲೇ ಮೋನಿ ಕತ್ತಲಿನ ಕಡೆಗೆ ಕೈ ತೋರಿಸಿದಳು. 'ಅಲ್ಲಿ ಏನೂ ಇಲ್ವಲ್ಲ?' ಎಂದರು. "ಅದೇ ಅಲ್ಲಿ ನೋಡು ಪಪ್ಪ ದೆವ್ವದ ಕಣ್ಣುಗಳು!" ಎಂದಳು. 'ಅಯ್ಯೋ ಪೆದ್ದಿ, ಅವು ದೆವ್ವದ ಕಣ್ಣುಗಳಲ್ಲ, ಬೆಕ್ಕಿನ ಕಣ್ಣುಗಳು" ಎಂದರು ತಂದೆ. "ಬೆಕ್ಕಿನ ಕಣ್ಣುಗಳಾ,,,,! ನಾನು ದೆವ್ವದ ಕಣ್ಣುಗಳು ಎಂದು ಭಾವಿಸಿಕೊಂಡು ಹೆದರಿದೆ" ಎಂದಳು. 'ದೆವ್ವನೂ ಇಲ್ಲ, ಭೂತನೂ ಇಲ್ಲ. ಎಲ್ಲಾ ನಮ್ಮ ಭ್ರಮೆ ಅಷ್ಟೆ' ಎಂದು ಇನ್ನೂ ಏನೋ ಹೇಳುತ್ತಿದ್ದರು. ಮಧ್ಯದಲ್ಲೇ ತಡೆದು "ಪಪ್ಪಾ ಬೆಕ್ಕಿನ ಕಣ್ಣುಗಳು ರಾತ್ರಿಯಲ್ಲಿ ಏಕೆ ಹೊಳೆಯುತ್ತವೆ?" ಎಂದಳು. ತಂದೆ ನೀಡಿದ ಕಿರುವಿವರಣೆ ಹೀಗಿದೆ.



ಬೆಕ್ಕುಗಳು ತಮ್ಮ ಕಣ್ಣಿನ ರೆಟಿನಾದ ಹಿಂದೆ 'ಟಪೆಟಮ್ ಲುಸಿಡಮ್' ಎಂದು ಕರೆಯಲ್ಪಡುವ ವಿಶೇಷ ಅಂಗಾಂಶದ ಪ್ರತಿಫಲಿತ ಪದರವನ್ನು ಹೊಂದಿವೆ. ಇದು ರೆಟಿನಾದ ಮೂಲಕ ಬೆಳಕನ್ನು ಪ್ರತಿಬಿಂಬಿಸುತ್ತದೆ ಮತ್ತು ಕಡಿಮೆ ಬೆಳಕಿನ ಪರಿಸ್ಥಿತಿಗಳಲ್ಲಿ ಬೆಕ್ಕಿನ ದೃಷ್ಟಿಯನ್ನು ಹೆಚ್ಚಿಸುತ್ತದೆ. ಅಂಗಾಂಶದ ಈ ಪದರವು ಕನ್ನಡಿಯಂತೆ ಕಾರ್ಯನಿರ್ವಹಿಸುತ್ತದೆ.

ಬೆಕ್ಕಿನ ಕಣ್ಣಿಗೆ ಬೆಳಕು ಪ್ರವೇಶಿಸಿದಾಗ ಟಪೆಟಮ್ ಲುಸಿಡಮ್ ರೆಟಿನಾದ ಮೂಲಕ ಬೆಳಕನ್ನು ಪ್ರತಿಬಿಂಬಿಸುತ್ತದೆ. ಇದು ಕಣ್ಣಿನಲ್ಲಿರುವ ದ್ಯುತಿಗ್ರಾಹಕ ಕೋಶಗಳಿಂದ ಪತ್ತೆಯಾದ ಬೆಳಕಿನ ಪ್ರಮಾಣವನ್ನು ಹೆಚ್ಚಿಸುತ್ತದೆ. ಈ ಪ್ರಕ್ರಿಯೆಯು ರಾತ್ರಿ ವೇಳೆ ಬೆಕ್ಕಿನ ದೃಷ್ಟಿಯನ್ನು ಹೆಚ್ಚಿಸುತ್ತದೆ ಮತ್ತು ಮುಸ್ಸಂಜೆ ಅಥವಾ ಮುಂಜಾನೆಯ ಸಮಯದಲ್ಲಿ ಕಡಿಮೆ ಬೆಳಕಿನ ಪರಿಸ್ಥಿತಿಗಳಲ್ಲಿ ನೋಡಲು ಸಹಕರಿಸುತ್ತದೆ.

ಯವುದಾದರೊಂದು ಬೆಳಕಿನ ಮೂಲದಿಂದ ಬಂದ ಬೆಳಕು ಬೆಕ್ಕಿನ ಕಣ್ಣಿಗೆ ಬಿದ್ದಾಗ, ಟಪೆಟಮ್ ಲುಸಿಡಮ್ ಆ ಬೆಳಕನ್ನು ಪ್ರತಿಫಲಿಸುತ್ತದೆ. ಅದು ಕತ್ತಲೆಯಲ್ಲಿ ಬ್ಯಾಟರಿಗಳಂತೆ ಗೋಚರಿಸುತ್ತದೆ. ಕಾರಿನ ಹೆಡ್‌ಲೈಟ್‌ಗಳು ಅಥವಾ ಫ್ಲ್ಯಾಷ್‌ಲೈಟ್‌ನಂತಹ ಬೆಳಕಿನ ಮೂಲವನ್ನು ಕತ್ತಲೆಯಲ್ಲಿ ಬೆಕ್ಕಿನ ಕಣ್ಣುಗಳ ಕಡೆಗೆ ನಿರ್ದೇಶಿಸಿದಾಗ ಈ ಪರಿಣಾಮವು ವಿಶೇಷವಾಗಿ ಕಾಣುತ್ತದೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಕುಣಿಕೆಗೆ ಕೊರಳೊಡ್ಡುವ ಮುನ್ನ......
# ತುಸು ಯೋಚಿಸಿ

ಬದುಕಿನ ಎಲ್ಲಾ ಬಾಗಿಲುಗಳು ಮುಚ್ಚಿರಬಹುದು, ಅದೆಷ್ಟೇ ನಿರಾಶೆ, ಗಾಢಾಂಧಕಾರ ಮನದಲ್ಲಿ ತುಂಬಿದ್ದರೂ ಭರವಸೆಯ ಕಿರು ಬೆಳಕಿನ ಒಂದು ಎಳೆ ನಮ್ಮನ್ನು ಬದುಕಿನತ್ತ ಮುಖ ಮಾಡಿಸುತ್ತದೆ. ಅದೆಷ್ಟೇ ಘೋರ ಅಮಾವಾಸ್ಯೆಯ ಕಗ್ಗತ್ತಲಿದ್ದರೂ ಕೆಲವೇ ಗಂಟೆಗಳಲ್ಲಿ ಪ್ರಖರ ಸೂರ್ಯನ ಬೆಳಕಿಗೆ ತೊಲಗಿ ಹೋಗುವಂತೆ, ನಿರಾಶೆಯ ಕೂಪದಲ್ಲಿ ಬಿದ್ದಿರುವ ವ್ಯಕ್ತಿಗೆ ಆಶಾವಾದದ ಒಂದು ಎಳೆ ಸಿಕ್ಕೇ ಸಿಗುತ್ತದೆ. ಸಮಸ್ಯೆಗಳು ಎಲ್ಲರ ಬದುಕಿನಲ್ಲೂ ಇರುತ್ತವೆ. ಅಕಸ್ಮಾತ್ ಈ ಜಗತ್ತಿನಲ್ಲಿ ಯಾರಾದರೂ ಸಮಸ್ಯೆಗಳಿಲ್ಲದವರು ಇದ್ದಾರೆ ಎಂದರೆ ಅದು ಇನ್ನೂ ಹುಟ್ಟಿರದ ಮಗು ಮತ್ತು ಈಗಾಗಲೇ ಸತ್ತು ಹೋಗಿರುವ ವ್ಯಕ್ತಿ ಎಂದರೆ ಸಮಸ್ಯೆ ಮಾನವ ಜನಾಂಗದ ಮೇಲೆ ಹೇಗೆ ಹರಡಿದೆ ಎಂಬುದರ ವ್ಯಾಪಕತೆಯ ಅರಿವಾಗುತ್ತದೆ. ಹಾಗೆಯೇ ಸಮಸ್ಯೆಗಳಿರುವವರು ಆತ್ಮಹತ್ಯೆ ಮಾಡಿಕೊಳ್ಳಬಹುದು ಎಂದಾದರೆ ಈ ಜಗತ್ತಿನಲ್ಲಿ ಒಂದೇ ಒಂದು ನರಪಿಳ್ಳೆ ಉಳಿಯಲಾರದು. ಬದುಕು ಒಡ್ಡುವ ಸಮಸ್ಯೆಗಳಿಗೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಭಾವಿಸುವ ಪ್ರತಿಯೊಬ್ಬ ಮನುಷ್ಯನು ಅರಿಯಬೇಕಾದುದು ಭಗವಾನ್ ಶ್ರೀಕೃಷ್ಣ ಹೇಳಿದ ಈ ಒಂದು ಸುಂದರ ಮಾತು 'ಈ ಸಮಯ ಕಳೆದು ಹೋಗುತ್ತದೆ'.

ಸಮಸ್ಯೆಯ ಆಯುಷ್ಯ ತುಂಬಾ ಕಡಿಮೆ. ಸಮಸ್ಯೆಯನ್ನು ಕೆಲವರು ಗುಡ್ಡದಂತೆ ಭಾವಿಸಿದರೆ ಮತ್ತೆ ಕೆಲವರು ಕಡ್ಡಿಯಂತೆ ಭಾವಿಸುತ್ತಾರೆ... ಇನ್ನು ಕೆಲವರು ಸಮಸ್ಯೆಗಳನ್ನು ಸವಾಲುಗಳಾಗಿ ಸ್ವೀಕರಿಸಿ ಬದುಕಿನಲ್ಲಿ ಯಶಸ್ಸನ್ನು ಪಡೆಯುತ್ತಾರೆ. ಆಯ್ಕೆ ನಮ್ಮದು ಎಂದಾದರೆ ನಾವುಗಳು ಯಾವುದನ್ನು ಆರಿಸಿಕೊಳ್ಳಲು ಬಯಸುತ್ತೇವೆ ?? ಪ್ರತಿ ಕತ್ತಲ ರಾತ್ರಿಗೂ ಒಂದು ಬೆಳಕಿನ ಹಗಲು ಇರುವಂತೆ, ಪ್ರತಿ ಅಂಧಕಾರಕ್ಕೂ ಒಂದು ಸೂರ್ಯೋದಯವಿರುವಂತೆ, ಪ್ರತಿ ಬೀಗದ ಕಾಯಿಗೂ ಒಂದು ಕೀಲಿ ಇರುವಂತೆ ಪ್ರತಿ ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರುತ್ತದೆ. ಆದ್ದರಿಂದ ಕುಣಿಕೆಗೆ ಕೊರಳೊಡ್ಡುವ ಮುನ್ನ ಕೊಂಚ ಯೋಚಿಸಿ... ಸಮಸ್ಯೆಗಳಿಂದ ಬಳಲುತ್ತಿರುವವರು ನೀವೊಬ್ಬರೇ ಅಲ್ಲ.

ಸ್ವಭಾವತಃ ಆತ್ಮಹತ್ಯೆ ಮಾಡಿಕೊಳ್ಳುವವರು ಅಂತರ್ಮುಖಿಗಳಾಗಿರುತ್ತಾರೆ. ಬೇರೆಯವರ ಮುಂದೆ ತಮ್ಮ ವೈಯಕ್ತಿಕ ವಿಚಾರಗಳನ್ನು ಹೇಳಿಕೊಳ್ಳಲು ಅವರ ಅಹಂ ಒಪ್ಪುವುದಿಲ್ಲ. ಮಾನಸಿಕವಾಗಿಯೂ ತುಸು ಬಲಹೀನರಾಗಿರುತ್ತಾರೆ. ಇನ್ನು ಕೆಲವು ಬಾರಿ ಎಲ್ಲ ರೀತಿಯ ಸೌಲಭ್ಯಗಳಿದ್ದಾಗಲೂ ಖಿನ್ನತೆಯಿಂದ ನರಳುವ ಕೆಲವರು ಆತ್ಮಹತ್ಯೆಗೆಳಸುತ್ತಾರೆ.

ಬಹುತೇಕ ಆತ್ಮಹತ್ಯೆಗೆಳಸುವವರಲ್ಲಿ ಪ್ರೇಮ ವೈಫಲ್ಯವೇ ಕಾರಣ, ತಮ್ಮ ಪ್ರೀತಿಯನ್ನು ಕುಟುಂಬದವರು ಒಪ್ಪಲಿಲ್ಲ ಎಂಬುದು ಬಹುಮುಖ್ಯ ಕಾರಣವಾದರೆ ಎಷ್ಟೋ ಬಾರಿ ಪ್ರೇಮಿಗಳ ನಡುವಿನ ಭಿನ್ನಾಭಿಪ್ರಾಯವೇ ಆತ್ಮಹತ್ಯೆಗೆ ಕಾರಣವಾಗುತ್ತದೆ. ನಾನು ಸತ್ತರೆ ಅವರಿಗೆ ತಮ್ಮ ಮಹತ್ವ ಗೊತ್ತಾಗುತ್ತದೆ ಎಂದು ಯಾರಿಗೋ ಬುದ್ಧಿ ಕಲಿಸಲು ಹೋಗಿ ತಮ್ಮನ್ನು ತಾವು ಬಲಿಕೊಟ್ಟುಕೊಳ್ಳುವುದು ಹುಚ್ಚುತನದ ಪರಮಾವಧಿ. ಮತ್ತೆ ಕೆಲವರು ಕೌಟುಂಬಿಕ ಸಮಸ್ಯೆ, ಸಾಲದ ಸುಳಿ, ಬಡತನ, ಆರೋಗ್ಯ ಸಮಸ್ಯೆ,ನೋವು, ಅಪಮಾನ ದ್ವೇಷ ಅಸೂಯೆಗಳಿಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ,ಕಾರಣ ಯಾವುದೇ ಇರಲಿ ಆತ್ಮಹತ್ಯೆಯೊಂದೇ ಇದಕ್ಕೆ ಪರಿಹಾರವಲ್ಲ.

ಜಗತ್ತಿನ ಬಹುತೇಕ ಎಲ್ಲಾ ಧಾರ್ಮಿಕ ಗ್ರಂಥಗಳು ಆತ್ಮಹತ್ಯೆಯನ್ನು ಘೋರ ಪಾಪ ಎಂದು ಹೇಳಿವೆ. ಪುನರ್ಜನ್ಮದಲ್ಲಿ ನಂಬಿಕೆ ಇರುವ ಹಿಂದೂ ಧರ್ಮದಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ವ್ಯಕ್ತಿ ರೌರವ ನರಕವನ್ನು ಪಡೆಯುತ್ತಾನೆ, ಆತನಿಗೆ ಮುಕ್ತಿ ದೊರೆಯುವುದಿಲ್ಲ ಎಂದು ಹೇಳುತ್ತದೆ. ಕುರಾನ್ ಬೈಬಲ್‌ಗಳು ಕೂಡ ಆತ್ಮಹತ್ಯೆಯನ್ನು ಪಾಪ ಎಂದೇ ಅನುಮೋದಿಸುತ್ತವೆ. ಜೈನ ಮುನಿಗಳಲ್ಲಿ ಈ ಹಿಂದೆ ಸಲ್ಲೇಖನವನ್ನು ಪಾಲಿಸುತ್ತಿದ್ದು ಇದು ಮನುಷ್ಯ ಮಾತ್ರರಿಗೆ ಸಾಧ್ಯವಿಲ್ಲದ ವಿಧಾನವಾಗಿದೆ. ಆದರೆ ಸಾಮಾಜಿಕವಾಗಿ ನೋಡುವುದಾದರೆ

* ಒಂದು ಹೊತ್ತಿನ ಕೂಳಿಗಾಗಿ ಒದ್ದಾಡುವ ಕುಟುಂಬ ವಿದ್ದರೂ ಕೂಡ ಬದುಕಿನ ಬಂಡಿಯನ್ನು ಸಾಗಿಸಲು ಹರಸಾಹಸ ಪಡುವ ಜನರಿದ್ದಾರೆ... ಎಲ್ಲಾ ಸವಲತ್ತುಗಳಿದ್ದರೂ ಅನುಭವಿಸುವ ಮನಸ್ಥಿತಿ ಇಲ್ಲದೆ ದುಶ್ಚಟಗಳ ದಾಸರಾಗಿ, ಖಿನ್ನತೆಯಂತಹ ಗೀಳು ರೋಗಗಳಿಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಜನರಿದ್ದಾರೆ.

ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬುದು ಒಂದು ಕ್ಷಣಿಕ ಸಮಯದ ತುಡಿತದ ಮನಸ್ಥಿತಿ. ಅಂತಹ ಮನಸ್ಥಿತಿಯ ಸಮಯದಲ್ಲಿ ವ್ಯಕ್ತಿಯು ಈ ಕೆಳಗಿನ ವಿಷಯಗಳನ್ನು ಪಾಲಿಸಿದರೆ ತನ್ನ ತಲೆಯಿಂದ ಆತ್ಮಹತ್ಯೆಯ ವಿಚಾರವನ್ನು ತೊಡೆದು ಹಾಕಬಹುದು.


* ಮನಸ್ಸಿಗೆ ಯಾವುದಾದರೂ ಸಮಸ್ಯೆ ಬಾಧಿಸಿ ಅದು ಆತ್ಮಹತ್ಯೆಗೆಳಸುತ್ತಿದ್ದರೆ... ಕೂಡಲೇ ನಿಮ್ಮ ಪಾಲಕರಲ್ಲಿ ಇಲ್ಲವೇ ಒಡಹುಟ್ಟಿದವರಲ್ಲಿ ನಿಮ್ಮ ಮನಸ್ಸಿನ ಕೋಲಾಹಲವನ್ನು ಹೇಳಿಕೊಳ್ಳಿ. ಇದು ಮನಸ್ಸಿನ ಭಾರವನ್ನು ಇಳಿಸುವುದರ ಜೊತೆಗೆ ಸಮಸ್ಯೆಯ ತೀವ್ರತೆಯನ್ನು ಕಡಿಮೆ ಮಾಡುವುದು. ನಿಮ್ಮನ್ನು ಅಷ್ಟೊಂದು ಪ್ರೀತಿಸುವ ಮತ್ತು ನಿಮ್ಮ ಮೇಲೆ ಭರವಸೆ ಇಟ್ಟಿರುವ ಕುಟುಂಬದ ಜನರನ್ನು ತೊರೆದು ಆತ್ಮಹತ್ಯೆ ಮಾಡಿಕೊಳ್ಳುವುದು ಅದೆಷ್ಟು ಘೋರ ತಪ್ಪು ಎಂಬುದರ ಅರಿವು ಮೂಡಿಸುತ್ತದೆ.

* ಮನುಷ್ಯ ಒಬ್ಬಂಟಿಯಾಗಿದ್ದಾಗಲೇ ಹೆಚ್ಚಾಗಿ ಆತ್ಮಹತ್ಯೆಯ ಯೋಚನೆಗಳು ಬರುವುದು. ಹಾಗೆ ಆತ್ಮಹತ್ಯೆಯ ಯೋಚನೆ ಬಂದಾಗ ಮನೆಯಿಂದ ಹೊರಗೆ ಸ್ನೇಹಿತರ ವಲಯದಲ್ಲಿ, ಸಂಬಂಧಿಕರ ನಡುವೆ ಹೋಗಿ ಕುಳಿತುಕೊಳ್ಳಿ.

* ಮನಸ್ಸು ಆತ್ಮಹತ್ಯೆಯ ಕುರಿತು ಯೋಚಿಸುತ್ತಿರುವಾಗ ಆತ್ಮಹತ್ಯೆ ಮಾಡಿಕೊಳ್ಳಲು ಬೇಕಾಗುವ ಪರಿಕರಗಳನ್ನು ಮನೆಯಿಂದ, ಇಲ್ಲವೇ ನೀವು ವಾಸಿಸುವ ಪರಿಸರದಿಂದ ಕೈಗೆಟುಕದಷ್ಟು ದೂರವಿಡಿ.

* ಔದ್ಯೋಗಿಕವಾಗಿ ತೊಂದರೆಯನ್ನು ಅನುಭವಿಸುತ್ತಿರುವಾಗ ಯಾರಲ್ಲೂ ಹೇಳಿಕೊಳ್ಳಲಾಗದೆ ಚಡಪಡಿಸುತ್ತಿರುವುದಕ್ಕಿಂತ ನಿಮ್ಮ ಸಿಟ್ಟು ಆಕ್ರೋಶವನ್ನು ಸಹೋದ್ಯೋಗಿಗಳ ಮುಂದೆ, ಸ್ನೇಹಿತರ ಮುಂದೆ ವ್ಯಕ್ತಪಡಿಸಿ.

* ಮಧ್ಯಪಾನ, ಮಾದಕ ಪದಾರ್ಥಗಳ ಸೇವನೆ ಮತ್ತು ಧೂಮಪಾನದಂತಹ ದುಶ್ಚಟಗಳು ನಿಮ್ಮ ಮಾನಸಿಕ ಸ್ಥಿತಿಯನ್ನು ಬಲಹೀನಗೊಳಿಸುವ ಕಾರಣ ಸಾಧ್ಯವಾದಷ್ಟು ಅವುಗಳನ್ನು




ದೂರವಿಡಿ. ಎಷ್ಟೋ ಬಾರಿ ಮಧ್ಯಪಾನ ಮಾಡಿದ ವ್ಯಕ್ತಿಗಳು ವಿವೇಚನಾ ರಹಿತರಾಗಿ ಆತ್ಮಹತ್ಯೆಗೆಳಸುವುದೂ ಉಂಟು.

* ಆತ್ಮಹತ್ಯೆಯ ಯೋಚನೆ ಮೂಡಿ ಬಂದಾಗ ಕಣ್ಣು ಮುಚ್ಚಿ ನೀವು ಆತ್ಮಹತ್ಯೆ ಮಾಡಿಕೊಂಡ ನಂತರದ ಪರಿಣಾಮಗಳಾದ ... ನಿಮ್ಮ ತಂದೆ ತಾಯಿಯಢಿ ಒಡಲುರಿಯ ಸಂಕಟದ ಆಕ್ರಂದನ,ಒಡಹುಟ್ಟಿದವರ ಮತ್ತು ಸ್ನೇಹಿತರ ನೋವು, ಆಕ್ರೋಶ, ಅಳು, ಪೊಲೀಸರ ತನಿಖೆ ಮುಂತಾದ ವಿಷಯಗಳ ಕುರಿತು ಒಮ್ಮೆ ಮನದಲ್ಲಿ ಯೋಚಿಸಿದಾಗ ಬಹುಶಃ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಭೂತ ಉಚ್ಚಾಟಿ ಸಲ್ಪಡಬಹುದು.

* ಒಳ್ಳೆಯ ಮನಶಾಸ್ತ್ರಜ್ಞರ ಬಳಿ ಸಮಾಲೋಚನೆಯ ಮೂಲಕ ತಮ್ಮ ತೊಂದರೆಯನ್ನು ಪರಿಹರಿಸಿಕೊಳ್ಳಬಹುದು. ಕೆಲವೊಮ್ಮೆ ಖಿನ್ನತೆ ಯಂತಹ ಮಾನಸಿಕ ರೋಗಗಳಿಂದ ಆತ್ಮಹತ್ಯೆ ಇಳಿಸುವವರು ಔಷಧಿ ಮತ್ತು ಚಿಕಿತ್ಸೆಯ ಮೂಲಕ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು. ಅಂತಿಮವಾಗಿ ಸಾಸಿವೆ ಇಲ್ಲದ ಮನೆಯಂತೆಯೇ ಸಮಸ್ಯೆಗಳಿಲ್ಲದ ಮನೆಯೂ ಈ ಜಗತ್ತಿನಲ್ಲಿ ಇಲ್ಲ. ಎಲ್ಲ ಸಮಸ್ಯೆಗಳಿಗೂ ಆತ್ಮಹತ್ಯೆಯೊಂದು ಪರಿಹಾರವಲ್ಲ.

ದಾಸರು ಹೇಳಿದಂತೆ " ಏಸು ಕಾಯಂಗಳ ಕಳೆದು 84 ಲಕ್ಷ ಕೋಟಿ ಜೀವರಾಶಿ ದಾಟಿ ಬಂದ ಈ ಶರೀರ ತಾನಲ್ಲ ತನ್ನದಲ್ಲ.. ಆಸೆ ತರವಲ್ಲ ದಾಸನಾಗು ವಿಶೇಷನಾಗು " ಈ ಪ್ರಪಂಚದಲ್ಲಿ ಇರುವ 84 ಲಕ್ಷ ಕೋಟಿ ಜೀವರಾಶಿಗಳಲ್ಲಿ ಅತ್ಯುತ್ಕೃಷ್ಟವಾದ ಮಾನವ ಶರೀರವನ್ನು ಪಡೆಯಲು ಅದೆಷ್ಟೋ ಜನ್ಮಗಳನ್ನು ಎತ್ತಿ ಬರ ಬೇಕಾಗುತ್ತದೆ.... ಆದರೂ ಕೂಡ ಈ ಶರೀರ ನಮ್ಮದಲ್ಲ ಆದ್ದರಿಂದ ಆಸೆಯನ್ನು ತೊರೆದು ಆ ದೇವರ ದಾಸನಾಗಿ... ಎಲ್ಲವೂ ಆ ದೇವರ ಕೃಪೆ, ಅವನಿಟ್ಟಂತೆ ಆಗಲಿ ಎಂಬ ಭಾವದಿಂದ ಬದುಕಿದಾಗ ಆತ್ಮಹತ್ಯೆಯಂತಹ ದುಷ್ಟ ಯೋಚನೆಗಳು ನಮ್ಮಿಂದ ದೂರ ಆಗುತ್ತವೆ.

ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ.... ಎಂಬ ಪುರಂದರ ದಾಸರ ನುಡಿಯನ್ನು ನೆನಪಿಸಿಕೊಳ್ಳುತ್ತಾ ಸಮಾಜದ ಯಾವುದೇ ಸ್ಥರದಲ್ಲಿಯಾದರೂ ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಥಿತಿಯವರನ್ನು ಗುರುತಿಸಲು ಪ್ರಯತ್ನಿಸಿ ಅವರನ್ನು ಸಂತೈಸಿ ತಪ್ಪು ನಿರ್ಧಾರ ಕೈಗೊಳ್ಳದಿರುವಂತೆ ಸಹಾಯ ಮಾಡುವ ಮೂಲಕ ಸದೃಢ ಮನಸ್ಥಿತಿ ಉಳ್ಳ ಸಮಾಜವನ್ನು ಕಟ್ಟುವ ಆಶಯ ಹೊಂದೋಣ.

# ಚುಟುಕು ಕ್ರಿಕೆಟ್‌ನ ಸಾರ್ವಭೌಮ ಭಾರತ

■ ರಾಜಶೇಖರ್
shekarraaj7@gmail.com

ಭಾರತೀಯರು ಕ್ರಿಕೆಟ್ ಆಟವನ್ನು ಸಂಭ್ರಮಿಸುವ ಪರಿ ಬಹುಶಃ ವಿಶ್ವದ ಬೇರೆಲ್ಲೂ ಕಾಣಲಾಗುವುದಿಲ್ಲ. ಭಾರತದಲ್ಲಿ ಅನೇಕ ಧರ್ಮಗಳಿದ್ದರೂ, ಕ್ರಿಕೆಟ್ ಮಾತ್ರ ಭಾರತೀಯರೆಲ್ಲರಿಗೂ ಒಂದು ಸಮಾನ ಧರ್ಮವಾಗಿದೆ. ಕ್ರಿಕೆಟ್ ನ ಜನಕ ಇಂಗ್ಲೆಂಡ್ ದೇಶವೇ ಆಗಿದ್ದರೂ, ಇಂದು ವಿಶ್ವ ಕ್ರಿಕೆಟ್ ಅನ್ನು ಆಳುತ್ತಿರುವುದು ಮಾತ್ರ ಭಾರತ ಎಂದರೆ ಅತಿಶಯೋಕ್ತಿಯಾಗಲಾರದು. ಮಕ್ಕಳಿಂದ ಹಿಡಿದು ವೃದ್ಧರಾದಿಯಾಗಿ ಕ್ರಿಕೆಟ್ ಆಟವನ್ನು ಸವಿಯುವ ಅಸಂಖ್ಯಾತ ಕೋಟಿ ಕೋಟಿ ಭಾರತೀಯರು ವಿಶ್ವದೆಲ್ಲೆಡೆ ವ್ಯಾಪಿಸಿದ್ದಾರೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಕ್ರಿಕೆಟ್ ಆಟವನ್ನು ನೋಡುವ ಜನರು ಸುಮಾರು ಜನಸಂಖ್ಯೆಯ ಶೇ 65 ರಷ್ಟು.. ಇತ್ತೀಚೆಗೆ ಭಾರತ 2024ರ ಚುಟುಕು ವಿಶ್ವಕಪ್ ಕೀರಿಟ ಧರಿಸಿದಾಗ ಭಾರತದಲ್ಲಿ ನಡೆದ ವಿಜೃಂಭಣೆಯ ಪರಿ, ದೇಶದೆಲ್ಲೆಡೆ ಸಡಗರ ಸಂಭ್ರಮವು ಮಿಂಚಿನ ಸಂಚಾರ ವಾಯಿತು. ನಾವು ಭಾರತೀಯರೇ ಹಾಗೇ ಎಲ್ಲದನ್ನು ಭಾವನಾತ್ಮಕವಾಗಿ ನೋಡುವುದು.

ಭಾರತ ಗೆದ್ದರೂ ಸಂಭ್ರಮ.. ಸೋತರೂ ದಿನಗಳುಗಟ್ಟಲೆ ವಿಮರ್ಶೆ, ಟೀಕೆ,ಟಿಪ್ಪಣಿಗಳು. ನಮ್ಮಲ್ಲಿ ಸಿನಿಮಾ ನಟರಿಗಿಂತಲೂ, ಕ್ರಿಕೆಟ್ ಕಲಿಗಳಿಗೆ ಹೆಚ್ಚು ಅಭಿಮಾನಿಗಳು. ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಕೆಟ್ ಪಟುಗಳನ್ನು ಹೆಚ್ಚು ಹೆಚ್ಚು ಫಾಲೋ ಮಾಡುತ್ತಾರೆ.

2011 ರ ಏಕದಿನ ಐಸಿಸಿ ವಿಶ್ವ ಕಪ್ ಗೆದ್ದ ಮೇಲೆ ಇದುವರೆಗೂ ಯಾವುದೇ ಐಸಿಸಿ ಗೆದ್ದಿರದ ಭಾರತ ಈ ಗೆಲುವಿನಿಂದ ಆ 13 ವರ್ಷಗಳ ಕ್ರಿಕೆಟ್ ಐಸಿಸಿ ದಾಹ ತೀರಿಸಿಕೊಂಡಂತಾಯಿತು. ಈ ಗೆಲುವಿನೊಂದಿಗೆ ಭಾರತ ಎರಡು ಬಾರಿ ಏಕದಿನ, ಎರಡು ಬಾರಿ ಚುಟುಕು ಕ್ರಿಕೆಟ್ ನ ಚಾಂಪಿಯನ್ ಆದಂತಾಯಿತು. ಐಸಿಸಿ 2007 ರಲ್ಲಿ ಆಯೋಜಿಸಿದ ವಿಶ್ವದ ಮೊಟ್ಟಮೊದಲ ಟಿ 20 ಕ್ರಿಕೆಟ್ ವಿಶ್ವಕಪ್ ನ್ನು ಭಾರತ ತನ್ನ ಮುಡಿಗೆರಿಸಿಕೊಂಡಿತು.

ಇದೇ ಹುಮ್ಮಸ್ಸಿನಲ್ಲಿ ಮರು ವರ್ಷ(2008)ದಿಂದಲೇ ಭಾರತದ ಬಿಸಿಸಿ ಐ ಇಂಡಿಯನ್ ಪ್ರೀಮಿರ್ ಲೀಗ್ (ಐಪಿಎಲ್) ಎಂಬ ಹೊಸ ಕ್ರಿಕೆಟ್ ಉತ್ಸವವ ನ್ನು ಭಾರತದಲ್ಲಿ ರಲ್ಲಿ ಮೊದಲ ಬಾರಿಗೆ ಆರಂಭಿಸಿತು. ಆಗಿನಿಂದ ಮುಂದುವರಿದು ಕ್ರಿಕೆಟ್ ನ ಹೊಸ ಪ್ರತಿಭೆಗಳು ಬೆಳಕಿಗೆ ತರುವಲ್ಲಿ, ಮತ್ತು ಈ ಪ್ರತಿಭೆಗಳು ರಾಷ್ಟ್ರೀಯ ತಂಡದಲ್ಲಿ ಆಡುವಲ್ಲಿ ಐ ಪಿ ಎಲ್ ಅತ್ಯಂತ ಯಶಸ್ವಿ ವೇದಿಕೆಯಾಗಿದೆ ಎನ್ನುವುದು ಎಲ್ಲರಿಗೂ ತಿಳಿದಿರುವುದು.

ಇದರಲ್ಲಿ ದೇಶಿಯ ಹೊಸ ಹೊಸ ಪ್ರತಿಭೆಗಳ ಜೊತೆಗೆ ವಿಶ್ವದ ಅಗ್ರ ಕ್ರಿಕೆಟ್ ಪಟುಗಳಿಂದ ಕೂಡಿರುವ ತಂಡಗಳ ನಡುವೆ




ನಡೆಯುವ ಎರಡು ತಿಂಗಳ ಕ್ರಿಕೆಟೋತ್ಸಾಹ ಕ್ರಿಕೆಟ್ ಅಭಿಮಾನಿಗಳಿಗೆ ರೋಮಾಂಚನವೂ ಹೌದು, ರಸದೌತಣವೂ ಹೌದು. ಇದು ಪ್ರತಿ ವರ್ಷ ಬೇಸಿಗೆಯಲ್ಲಿ ಎರಡು ತಿಂಗಳ ಕಾಲ ನಡೆಯುವ ಈ ಕ್ರಿಕೆಟ್ ನುಡಿ ಹಬ್ಬಕ್ಕೆ ವಿಶ್ವದಾದ್ಯಂತ ಕ್ರಿಕೆಟ್ ಅಭಿಮಾನಿಗಳು ಸಾಕ್ಷಿಯಾಗುತ್ತಾರೆ.

ಇತ್ತೀಚೀನ ವರ್ಷಗಳಲ್ಲಿ ಹೊಸ ಹೊಸ ತಂತ್ರಜ್ಞಾನದ ಬಳಕೆಯನ್ನು ಐ ಪಿ ಎಲ್ ಯಶಸ್ವಿಯಾಗಿ ಬಳಸಿಕೊಂಡು ಕ್ರಿಕೆಟ್ ಆಟವನ್ನು ಇನ್ನಷ್ಟು ಪಾರದರ್ಶಕವಾಗಿಸಿದೆ ಎಂದರೆ ತಪ್ಪಾಗಲಾರದು.

ಮುಂಚಿನ ತರಹ ಮನೆಯಲ್ಲಿ ಕುಳಿತು ಟಿವಿ ಗಳಲ್ಲಿ ಮಾತ್ರ ಪಂದ್ಯಗಳು ನೋಡಬೇಕೆಂದೇನಿಲ್ಲ. ಮೊಬೈಲ್ ಆಪ್ ಗಳಿಗೆ ಚಂದಾದಾರರಾಗಿ, ನಮ್ಮ ಕೆಲಸ ಕಾರ್ಯಗಳ ಜೊತೆಗೆ, ಪ್ರಯಾಣದ ಜೊತೆಗೆ ಪಂದ್ಯಗಳನ್ನು ನೇರ ಪ್ರಸಾರ ದಲ್ಲಿ 360 ಡಿಗ್ರಿ ಕೋನ ದಲ್ಲಿ ನೋಡಬಹುದು.

ಇನ್ನು ಭಾರತದ ಯುವ ಸಮೂಹ ವಂತೂ ಎರಡು ತಿಂಗಳ ಬೇಸಿಗೆಯ ಪ್ರತಿ ಸಂಜೆಯು ಹಳ್ಳಿಯಿಂದ ದಿಲ್ಲಿಯವರೆಗೂ ಟಿವಿ ಮತ್ತು ಮೊಬೈಲ್ಗಳಿಗೆ ಮುಖ ಮಾಡಿರುತ್ತಾರೆ. ಐಪಿಎಲ್ ಕ್ರಿಕೆಟ್ ಭಾರತದಲ್ಲಿ ಪ್ರತಿ ವರ್ಷ ಸಾವಿರಾರು ಕೋಟಿ ವ್ಯವಹಾರ ಮಾಡುತ್ತದೆ. ಇದು ಬರೀ ಕ್ರೀಡಾಕೂಟವಾಗಿರದೆ, ಕ್ರೀಡೆ ಆಚೆಗೂ ದಾಟಿದ ವಾಣಿಜ್ಯ ವ್ಯವಹಾರವೂ ಆಗಿದೆ.

ಇದರಲ್ಲಿ ನೋಡುಗರಿಗೆ ನೋಡುವ ಥ್ರಿಲ್ ಮತ್ತು ಮನೋರಂಜನೆ ಜೊತೆಗೆ ಬೆಟ್ಟಿಂಗ್ ಮೂಲಕ ಹಣ ಗಳಿಸುವ ಮಾಧ್ಯಮವೂ ಆಗಿರುವುದು ಗುಟ್ಟಾಗಿ ಉಳಿದಿಲ್ಲ. ಅನಧಿಕೃತ ಬೆಟ್ಟಿಂಗ್ ಜೊತೆಗೆ, ಇತ್ತೀಚಿನ ವರ್ಷಗಳಲ್ಲಿ ಅಧಿಕೃತವಾಗಿ ಮೊಬೈಲ್ ಮೂಲಕ ಡ್ರೀಮ್ 11, ಮೈ 11 ಸರ್ಕಲ್ ಮುಂತಾದ ಆಪ್ ಗಳಿಂದಲೂ ಹಣ ಗಳಿಸಬಹುದು. ತಮ್ಮದೇ ಆದ ಒಂದು ತಂಡ ನಿರ್ಮಿಸಿ, ಆ ತಂಡದ ಆಟಗಾರರು ಉತ್ತಮ ಪ್ರದರ್ಶನ ಮಾಡಿದಲ್ಲಿ ಯಾರಾದರೂ ಹಣ ಗಳಿಸಬಹುದು.

ಪ್ರಪಂಚಕ್ಕೆ ಕ್ರಿಕೆಟ್ ಅನ್ನು ಬಿಸಿನೆಸ್ ಸೆಂಟರ್ ಆಗಿ ಮಾಡಬಹುದು ಎಂದು ತೋರಿಸಿಕೊಟ್ಟದ್ದೆ ಐ ಪಿ ಎಲ್.. ಭಾರತ ಎರಡನೇ ಟಿ 20 ವಿಶ್ವಕಪ್ ಗೆದ್ದಿರುವ ಈ ಸಂಧರ್ಭದಲ್ಲಿ, ಮೊದಲನೇ ಟಿ 20 ವಿಶ್ವಕಪ್ ಗೆದ್ದ ಭಾರತ ನಂತರದಲ್ಲಿ ಹುಟ್ಟುಹಾಕಿದ ಐ ಪಿ ಎಲ್ ಎಂಬ ಸಂಚಲನವು ಕ್ರಿಕೆಟ್ ಪ್ರಪಂಚವನ್ನು ಭಾರತದ ಕಡೆ ಮುಖ ಮಾಡಿಸುವಲ್ಲಿ ಯಶಸ್ವಿ ಆಗಿದೆ ಎಂದೇ ಹೇಳಬಹುದು.

# ಹೆಚ್‌ಐವಿ ಸೋಂಕು, ರೋಗಗಳನ್ನು ಗುರ್ತಿಸಿ ಚಿಕಿತ್ಸೆ ನೀಡುವ ಸಂಚಾರಿ ಜಾಗೃತಿ ವಾಹನ

## ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಚಾಲನೆ। ಸುಸಜ್ಜಿತ ವಾಹನವು ನಗರದ ಕೊಳಚೆ ಪ್ರದೇಶಗಳಿಗೆ ಸಹಾಯವಾಗಲಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಹೆಚ್‌ಐವಿ ಸೋಂಕು ಸೇರಿದಂತೆ ಇತರೆ ರೋಗಗಳನ್ನು ಸಕಾಲದಲ್ಲಿ ಗುರ್ತಿಸಿ ಚಿಕಿತ್ಸೆ ನೀಡುವ ಸಂಚಾರಿ ಜಾಗೃತಿ ವಾಹನಕ್ಕೆ ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ಗುರುವಾರ ಚಾಲನೆ ನೀಡಿದರು.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಮೂಲಕ ಒದಗಿಸಲಾದ ಸುಸಜ್ಜಿತ ಸಂಚಾರಿ ಪ್ರಯೋಗಾಲಯ, ಆಪ್ತಸಮಾಲೋಚನೆ ಹಾಗೂ ಜನಜಾಗೃತಿ ನೀಡಲು ಎಲ್‌ಇಡಿ ಟಿವಿ ಹೊಂದಿದ ವಾಹನಕ್ಕೆ ಚಾಲನೆ ನೀಡಿ, ಬಳಿಕ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ರಾಜ್ಯ ಸರ್ಕಾರವು ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದು, ಜಿಲ್ಲೆಗೆ ಹಸ್ತಾಂತರಿಸಲಾದ ಸುಸಜ್ಜಿತ ವಾಹನವು ಗ್ರಾಮೀಣ ಪ್ರದೇಶ ಒಳಗೊಂಡಂತೆ ನಗರದ ಕೊಳಚೆ ಪ್ರದೇಶಗಳ ಜನತೆಗೆ ಹೆಚ್ಚಿನ ರೀತಿಯಲ್ಲಿ ಸದುಪಯೋಗವಾಗುವಂತೆ ನಿಗಾವಹಿಸಬೇಕು ಎಂದು ಹೇಳಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ಪ್ರಸ್ತುತ ಜಿಲ್ಲೆಗೆ ಒದಗಿಸಲಾದ ಸಂಚಾರಿ ವಾಹನದಲ್ಲಿ ಸುಸಜ್ಜಿತ ಪ್ರಯೋಗಾಲಯ ಮತ್ತು ಆಪ್ತ ಸಮಾ ಲೋಚನೆಯ ಪ್ರತ್ಯೇಕ ವಿಭಾಗವಿದ್ದು, ಪ್ರಯೋಗಾಲಯ ತಂತ್ರಜ್ಞರಿಗೆ ಅಗತ್ಯ ವೈದ್ಯಕೀಯ ಪರಿಕರಗಳನ್ನು ವ್ಯವಸ್ಥಿತವಾಗಿ ಕಾಯ್ದಿಟ್ಟುಕೊಳ್ಳಲು ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಸಾರ್ವಜನಿಕರಿಗೆ ವಾಹನದಲ್ಲಿ ಕುಳಿತುಕೊಳ್ಳುವ ಆಸನದ ವ್ಯವಸ್ಥೆಯಿದೆ. ಹೆಚ್‌ಐವಿ ಸೇರಿದಂತೆ ಇತರೆ ರೋಗಗಳಿಗೆ ಮತ್ತು ವೈಯಕ್ತವಾಗಿ ಕಂಡು ಬರುವ ಕಾಯಿಲೆಗಳಿಗೆ ಆಪ್ತ ಸಮಲೋಚನೆ ಮೂಲಕ ಧೈರ್ಯ ತುಂಬುವ ಕಾರ್ಯವನ್ನು ಆಪ್ತ ಸಮಾಲೋಚಕರು ಮಾಡುವರು. ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಜನತೆಯು ಇದರ ಸೌಲಭ್ಯ ಪಡೆಯಬೇಕು ಎಂದು ಅವರು ವಿನಂತಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಯೂ ಆದ ಡಾ. ಇಂದ್ರಾಣಿ ಅವರು ಜಿಲ್ಲೆಯಲ್ಲಿ ಹೆಚ್‌ಐವಿ ನಿಯಂತ್ರಣ ಚಟುವಟಿಕೆಗಳಿಗೆ ವಾಹನವನ್ನು ಬಳಸುವ ಕುರಿತು ಮಾಹಿತಿ ನೀಡಿದರು.

ಈ ವೇಳೆ ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ಅಧ್ಯಕ್ಷ ಮುಂಡರಗಿ ನಾಗರಾಜ, ಪಾಲಿಕೆಯ ಉಪಮೇಯರ್ ಡಿ.ಕುಸುಂ, ಆರೋಗ್ಯ ಶಿಕ್ಷಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷೆ ಪದ್ಮ ರೋಜ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಸ್ಥಳೀಯ ಮುಖಂಡರಾದ ವಿವೇಕ್, ಫಯಾಜ್, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಟಾನಾಧಿಕಾರಿ ಡಾ.ಪೂರ್ಣಿಮ ಕಟ್ಟಿಮನಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ,. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವಿರೇಂದ್ರ ಕುಮಾರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡ್ಯಾಪ್ಕೋ ಮೇಲ್ವಿಚಾರಕರಾದ ಗಿರೀಶ್ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಕಡ್ಡಾಯವಾಗಿ ಅಳವಡಿಸಿಕೊಳ್ಳಿ

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಸದಸ್ಯ ಶೇಖರಗೌಡ ಜಿ.ರಾಮತ್ನಾಳ ಹೇಳಿಕೆ




■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲೆಯ ಎಲ್ಲ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ, ಬಾಲಮಂದಿರಗಳಲ್ಲಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ–2016 ಅನ್ನು ಕಡ್ಡಾಯವಾಗಿ ಅಳವಡಿಸಿಕೊಂಡು, ನಿಯಮಾನುಸಾರ ಅನುಷ್ಠಾನ ಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ. ರಾಮತ್ನಾಳ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ, ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರ ಸಹಯೋಗದಲ್ಲಿ ಶುಕ್ರವಾರದಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಮಕ್ಕಳ ರಕ್ಷಣಾ ವ್ಯವಸ್ಥೆಗಳ ಕುರಿತು ಭಾಗೀದಾರರೊಂದಿಗೆ ಸಮಾಲೋಚನೆ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳ ರಕ್ಷಣಾ ನೀತಿ–2016 ರಲ್ಲಿ ಮಕ್ಕಳಿಗೆ ಒದಗಿಸಬೇಕಾದ ಅಗತ್ಯ ಮೂಲಭೂತ ಸೌಕರ್ಯಗಳು, ಭದ್ರತೆ, ಮಕ್ಕಳ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು, ಮುಂತಾದ ವಿಷಯಗಳ ಕುರಿತು ವಿಶೇಷ ಹಾಗೂ ವಿವರವಾದ ನಿಯಮಗಳಿವೆ. ಆದ್ದರಿಂದ ಜಿಲ್ಲೆಯ ಎಲ್ಲ ವಸತಿ ನಿಲಯ, ವಸತಿ ಶಾಲೆ, ಶೈಕ್ಷಣಿಕ ಸಂಸ್ಥೆಗಳು, ಬಾಲಮಂದಿರಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಆ ಮೂಲಕ ನೀತಿಯನ್ವಯ ಎಲ್ಲ ಸೌಲಭ್ಯವನ್ನು ಮಕ್ಕಳಿಗೆ ಒದಗಿಸಬೇಕು. ಈ ಕುರಿತಂತೆ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ನೀತಿಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿ, ಪಾಲಿಸುತ್ತೇವೆ ಎಂಬುದಾಗಿ ಬದ್ಧತಾ ಪತ್ರಕ್ಕೆ ಸಹಿ ಹಾಕಬೇಕು ಎಂದು ಸದಸ್ಯರು ಅಧಿಕಾರಿಗಳಿಗೆ ಸೂಚಿಸಿದರು.

ಶಾಲೆಯಿಂದ ಹೊರಗುಳಿದ ಮಕ್ಕಳು, ಬಾಲ ಕಾರ್ಮಿಕರು, ಬಾಲ ಗರ್ಭಿಣಿಯರು, ಮಕ್ಕಳ ಅಕ್ರಮ ಸಾಗಾಣಿಕೆ, ಮಕ್ಕಳ ಭಿಕ್ಷಾಟನೆ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿ, ಸಂತ್ರಸ್ತ ಮಕ್ಕಳಿಗೆ ಸೂಕ್ತ ಪುನರ್ವಸತಿ ಕಲ್ಪಿಸುವ ಕುರಿತಂತೆ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ ಅವರ ಅಧ್ಯಕ್ಷತೆಯಲ್ಲಿ ನಿಯಮಿತವಾಗಿ ಸಭೆಗಳನ್ನು ಆಯೋಜಿಸಬೇಕು. ಎಲ್ಲ ಸರ್ಕಾರಿ ಸಂಸ್ಥೆ, ಕಚೇರಿಗಳಲ್ಲಿ ಮಕ್ಕಳ ಸಹಾಯವಾಣಿಯ ಬಗ್ಗೆ ಮಾಹಿತಿ ಫಲಕ ಅಳವಡಿಸಬೇಕು. ಗ್ರಾಮ ಪಂಚಾಯತಿಗಳಲ್ಲಿ ನಿಯಮಿತವಾಗಿ ಮಕ್ಕಳ ಗ್ರಾಮಸಭೆ ನಡೆಸಬೇಕು. ಮಕ್ಕಳ ಗ್ರಾಮ ಸಭೆಯಲ್ಲಿ ಬಾಲ್ಯವಿವಾಹದ ದುಷ್ಪರಿಣಾಮ, ಶಿಕ್ಷೆಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸ್ಥಳೀಯ ಸಂಸ್ಥೆಗಳಿಂದ ನಗರ, ಗ್ರಾಮೀಣ ಪ್ರದೇಶಗಳಲ್ಲಿ ಕಸ ಸಂಗ್ರಹಕ್ಕಾಗಿ ಸಂಚರಿಸುವ ವಾಹನಗಳಲ್ಲಿಯೂ ಬಾಲ್ಯವಿವಾಹದ ದುಷ್ಪರಿಣಾಮ, ಶಿಕ್ಷೆಯ ಬಗ್ಗೆ ಜಿಂಗಲ್ಸ್‌ಗಳನ್ನು ಪ್ರಸಾರ ಮಾಡಬೇಕು. ಜಿಲ್ಲೆಯಲ್ಲಿರುವ ವಿಕಲಚೇತನ ಮಕ್ಕಳಿಗೆ ಯು.ಡಿ.ಐ.ಡಿ ಕಾರ್ಡ್‌ಗಳನ್ನು ಒದಗಿಸಿ, ಸರ್ಕಾರದ ಸೌಲಭ್ಯ ಪಡೆಯಲು ಅನುಕೂಲ ಕಲ್ಪಿಸಬೇಕು ಎಂದು ಸದಸ್ಯರು ಅಧಿಕಾರಿಗಳಿಗೆ ತಿಳಿಸಿದರು.

ಡಿವೈಎಸ್‌ಪಿ ಮುತ್ತಣ್ಣ ಸವರಗೋಳ ಅವರು ಮಾತನಾಡಿ, ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ವಿವಿಧ ಇಲಾಖೆಗಳ ಸಹಕಾರ ಮುಖ್ಯವಾಗುತ್ತದೆ. ಪ್ರಸ್ತುತ ಸಾಮಾಜಿಕ ಜಾಲತಾಣಗಳು, ಟಿ.ವಿ., ಸಿನೆಮಾ, ಮೊಬೈಲ್ ಬಳಕೆಯಿಂದ ಮಕ್ಕಳು ವಯಸ್ಸಿಗಿಂತ ಹೆಚ್ಚಿನ ತಿಳುವಳಿಕೆ ಪಡೆಯುತ್ತಿದ್ದು, ಅದನ್ನು ನಕಾರಾತ್ಮಕ ವಿಷಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಒಂದು ಹಂತದಲ್ಲಿ ಮನಸ್ಸು ವಿಕೃತಗೊಂಡು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ. ಇದಕ್ಕೆ ಸಾಮಾಜಿಕ ಹಾಗೂ ಕೌಟುಂಬಿಕ ಕಾರಣಗಳೂ ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ ಮಕ್ಕಳ ವಿಷಯದಲ್ಲಿ ಕೇವಲ ಸರ್ಕಾರ, ಆಯೋಗ ಮಾತ್ರವಲ್ಲ ಮಕ್ಕಳ ಪೋಷಕರೂ ಕೂಡ ಜವಾಬ್ದಾರಿಯಿಂದ ತಮ್ಮ ಕರ್ತವ್ಯ ಪಾಲಿಸಬೇಕು. ಉತ್ತಮ ವಾತಾವರಣ ನಿರ್ಮಿಸಿ, ಮಕ್ಕಳ ಮನೋ–ದೈಹಿಕ ಬೆಳವಣಿಗೆಗೆ ಪೂರಕ ಪರಿಸರ ನಿರ್ಮಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ.ಕಡಿ, ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಡಿ. ಮಂಜುನಾಥ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ತಿಪ್ಪಣ್ಣ ಸಿರಸಗಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಸೇರಿದಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು, ಸದಸ್ಯರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳಿದ್ದರು.

# ಮುಂಗಾರು ಹಂಗಾಮಿನ ಬೆಳೆ ಸ್ಪರ್ಧೆಗಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

2024–25ನೇ ಸಾಲಿನ ಕೃಷಿ ಪ್ರಶಸ್ತಿಯಡಿ ಮುಂಗಾರು ಹಂಗಾಮಿನ ಕೃಷಿ ಪ್ರಶಸ್ತಿ ಕಾರ್ಯಕ್ರಮದಡಿ ಬೆಳೆ ಸ್ಪರ್ಧೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರಿ ಆದೇಶದನ್ವಯ ಪ್ರಸಕ್ತ ಸಾಲಿನ ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮಗಳನ್ನು ಮುಂದುವರೆಸಲಾಗಿರುತ್ತದೆ. ಈ ಸಂಬಂಧ, 2024–25ನೇ ಸಾಲಿನ ಕೃಷಿ ಪ್ರಶಸ್ತಿಯಡಿ ಬೆಳೆ ಸ್ಪರ್ಧೆಗೆ ಆಸಕ್ತ ರೈತ ಮತ್ತು ರೈತ ಮಹಿಳೆಯರು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರಸಕ್ತ ಸಾಲಿನ ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಕೃಷಿ ಇಲಾಖೆಯ ಕೆ–ಕಿಸಾನ್ ಪೋರ್ಟಲ್ (K-Kisan Portal)ನಲ್ಲಿ ನೂತನವಾಗಿ ಕೃಷಿ ಪ್ರಶಸ್ತಿಗೆ ಅರ್ಜಿ ನಮೂನೆಯನ್ನು ಅಳವಡಿಸಲಾಗಿರುತ್ತದೆ. ಸಿಟಿಜನ್ ಲಾಗಿನ್ ಅಥವಾ ಆರ್.ಎಸ್.ಕೆ ಲಾಗಿನ್ ಮೂಲಕ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸೇವಾ ಕೇಂದ್ರದಲ್ಲಿ ಸ್ವತಃ ಆಸಕ್ತ ರೈತ ಮತ್ತು ರೈತ ಮಹಿಳೆಯರು ಪ್ರತ್ಯೇಕವಾಗಿ ಸದರಿ ಕೆ–ಕಿಸಾನ್ ಪೋರ್ಟಲ್ ರಡಿ ಅಗತ್ಯ ಮಾಹಿತಿಗಳೊಂದಿಗೆ ತಮ್ಮ ಎಫ್‌ಐಡಿ (ಫ್ರೂಟ್ಸ್ ಐಡೆಂಟಿಫಿಕೇಶನ್) ಯನ್ನು ಬಳಸಿಕೊಂಡು ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಅಲ್ಲದೇ ಸರ್ಕಾರಿ ಆದೇಶದಂತೆ ಪ್ರಸಕ್ತ ಸಾಲಿನಿಂದ ಕೃಷಿ ಪ್ರಶಸ್ತಿಯಡಿ ಬೆಳೆ ಸ್ಪರ್ಧೆಗೆ ಅರ್ಜಿ ಶುಲ್ಕವನ್ನು ರದ್ದುಗೊಳಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ಆಗಸ್ಟ್ 31 ಕೊನೆಯ ದಿನವಾಗಿದೆ. ಕೃಷಿ ಪ್ರಶಸ್ತಿ ಯೋಜನೆಯಡಿ ರಾಜ್ಯ ಮಟ್ಟದ ಬೆಳೆ ಸ್ಪರ್ಧೆಗೆ ನೀರಾವರಿ ಮತ್ತು ಮಳೆಯಾಶ್ರಿತ ಭತ್ತ ಹಾಗೂ ಮಳೆಯಾಶ್ರಿತ ಶೇಂಗಾ, ನವಣೆ, ಸಜ್ಜೆ, ಮುಸುಕಿನ ಜೋಳ ಮತ್ತು ತೊಗರಿ (ಪೂರ್ಣ ಬೆಳೆ), ಈ ಎಲ್ಲಾ ಮುಂಗಾರು ಹಂಗಾಮಿನ ಬೆಳೆಗಳನ್ನು ಆಯ್ಕೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಕೆ–ಕಿಸಾನ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಲು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಿ.

# ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದಿಂದ ಪ್ರಸ್ತಕ ಸಾಲಿನ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆ (20+1) ಅಡಿ ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗಿರುವವರಿಗೆ ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಬಳ್ಳಾರಿ ಜಿಲ್ಲೆಗೆ ನಿಗದಿಯಾದ 77 ಗುರಿಗಳಲ್ಲಿ ಪರಿಶಿಷ್ಟ ಜಾತಿ 12, ಪರಿಶಿಷ್ಟ ಪಂಗಡ 04, ಅಲ್ಪಸಂಖ್ಯಾತ 12, ಅಂಗವಿಕಲ 03 ಹಾಗೂ ಸಾಮಾನ್ಯ ವರ್ಗದ 46 ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಆಸಕ್ತರು ನಿಗದಿತ ಅರ್ಜಿ ನಮೂನೆಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೊಸಪೇಟೆ, ವಿಜಯನಗರ ಜಿಲ್ಲೆ ಹಾಗೂ ಹತ್ತಿರದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಿಂದ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ಸಂಬಂಧಿಸಿದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ನೀಡಬೇಕು.

ಅರ್ಜಿ ಸಲ್ಲಿಸಲು ಜು.20 ಕೊನೆಯ ದಿನವಾಗಿದೆ ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕವಿ ಮನಸು

### ಅಪರೂಪದ ನಿರೂಪಕಿ



ಕನ್ನಡದ ಖ್ಯಾತ ನಿರೂಪಕಿ ಅಪರ್ಣ
ಇನ್ನೂ ಮುಗಿದಿರಲಿಲ್ಲವೇನೋ ನಿನ್ನ
ಅಂತಿಮ ಪಯಣ ಭಾವ ಎಮಗೆ
ಹೇಳಿದೆ ಅಂತಿಮ ವಿದಾಯ ಕೊನೆಗೆ


ಮುಕ್ತಾ ಧಾರವಾಹಿ ಮುಕ್ತ ನಟನೆ
ಮೂಡಲಮನೆಯಲಿ ಅದ್ಭುತ ನಟನೆ
ಚಂದನ ಚಾನಲ್ ಉತ್ತಮ ನಿರೂಪಕಿ
ನಿರೂಪಣೆಯಲ್ಲಿ ಇಲ್ಲ ನಿನ್ನಂಥಾಕಿ

ಹುಟ್ಟಿದವರಿಗೆ ಅಕ್ಕ ಬೆಳೆವವರಿಗೆ ತಂಗಿ
ಶಾಂತ ಸ್ವಭಾವ ಹೊತ್ತ ನಗುಮೊಗದ
ಅಂಗಿ
ಮಸಣದ ಹೂ ಚಿತ್ರದಲ್ಲಿ ನಟಿಸಿದಾಕಿ
ತೀರಿಸಿದೆ ಇಂದು ಮಸಣದ ಬಾಕಿ

ಮಜಾ ಟಾಕೀಸ್ ಒನ್ ಅಂಡ್ ಓನ್ಲಿ
ವರಲಕ್ಷ್ಮಿ
ಕನ್ನಡಿಗರ ನಗೆಗಡಲಿನಲ್ಲಿ ತೇಲಿಸಿದಾಕಿ
ಹೇಳಲೇಬೇಕಿಂದು ನಿನಗೆ ಅಂತಿಮ
ವಿದಾಯ
ಹುಟ್ಟಿ ಬಾ ಕರುನಾಡಲಿ ಹೇಳುವೆ ಶುಭ
ಪ್ರದಾಯ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್
ಹೊಸಪೇಟೆ

### ಮರವಂತೆ



ಬಿರುಮಳೆ ಸುರಿದರೆ ನದಿಗಳಿಗೌತಣ
ತುಂಬುತ ಹರಿವವು ಮೈಮರೆತು
ಮಣ್ಣದು ಮಿಶ್ರಿತ ಕೆಂಪಿನ ಜಲವಿದು
ನೋಡಲು ಭಯವನು ತರಿಸಿತ್ತು

ಅಡೆತಡೆ ಇಲ್ಲದೆ ಹರಿವವು ರಭಸದಿ
ಆತುರ ಕಡಲಿನ ಸಂಗಮಕೆ
ಕಲುಷಿತ ನೀರನು ಒಲ್ಲದ ಸಾಗರ
ತಡೆಯನು ನೀಡಿತು ಸಂಭ್ರಮಕೆ

ಕಡಲಿನ ಅಲೆಗಳ ನಿಲ್ಲದ ನರ್ತನ
ದಡವನು ಚುಂಬಿಸೆ ಹೆಬ್ಬಯಕೆ
ಶರಧಿಯ ಅಲೆಗಳ ಬಯಕೆಯ ಕೆಣಕಲು
ಉದ್ದದ ರಸ್ತೆಯು ತಡೆಯದಕೆ

ಅರ್ಧದ ವರ್ತುಲ ಸಾಲಲಿ ನಿರ್ಮಿಸಿ
ಸೆಳೆಯುತಲಿರುವುದು ಮರವಂತೆ
ಕಡಲಿನ ತೆರೆಗಳ ಅಂದವ ಕಾಣುತ
ನೋಡುಗ ಮೈಮನ ಮರೆವಂತೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper



ಹಂಪಿ ಟೈಮ್ಸ್
HAMPI TIMES

## ಮೈಕ್ರೋ ನ್ಯೂಸ್

### ಶೇ.05 ರಷ್ಟು ರಿಯಾಯಿತಿ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸ್ತುತ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದಲ್ಲಿ ಶೇ.05 ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಧಿಯನ್ನು ಜು.13 ರ ವರೆಗೆ ವಿಸ್ತರಿಸಲಾಗಿದೆ. ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡಿಸಿ ಕೊಳ್ಳಬೇಕು ಎಂದು ಪಾಲಿಕೆಯ ಆಯುಕ್ತ ಜಿ.ಖಲೀಲ್‌ಸಾಬ್ ತಿಳಿಸಿದ್ದಾರೆ.

### ಕಂಪ್ಲಿ: ಡಯೇರಿಯಾ ನಿಯಂತ್ರಣ ಅಭಿಯಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಡಯೇರಿಯಾ ಸಾಂಕ್ರಾಮಿಕ ರೋಗ ಹರಡುವಿಕೆ ತಡೆಗಟ್ಟುವ ಅಭಿಯಾನವನ್ನು ಜು.01 ರಿಂದ ಆಗಸ್ಟ್ 31ರ ವರೆಗೆ ಎರಡು ತಿಂಗಳ ಕಾಲ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಂಪ್ಲಿ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಅಶುಚಿತ್ವ, ಜನದಟ್ಟಣೆ, ಪ್ರಾಣಿಗಳೊಂದಿಗೆ ಒಡನಾಟ, ಕಲುಷಿತ ನೀರು, ಕೊಳಕು ಕೈ, ಮತ್ತು ಬ್ಯಾಕ್ಟೀರಿಯಾಗಳಿಂದ ಡಯೇರಿಯಾ ರೋಗವು ಹರಡಲಿದ್ದು, ಕಿಬ್ಬೊಟ್ಟೆಯ ಹೊಟ್ಟೆನೋವು, ಸೆಳೆತ, ವಾಕರಿಕೆ, ಜ್ವರ, ಭೇದಿ ಮುಂತಾದ ಲಕ್ಷಣಗಳು ಕಂಡುಬರುತ್ತದೆ. ಹಾಗಾಗಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಮನೆಯ ಸುತ್ತಮುತ್ತ ಶುಚಿತ್ವ ಕಾಯ್ದುಕೊಂಡು, ಕಸವನ್ನು ವಿಂಗಡಿಸಿ ಪುರಸಭೆ ವಾಹನಗಳಿಗೆ ನೀಡಬೇಕು ಹಾಗೂ ಕುದಿಸಿ ಆರಿಸಿದ ನೀರನ್ನು ಕುಡಿದು ಇನ್ನಿತರೆ ಮುಂಜಾಗ್ರತಾ ಆರೋಗ್ಯ ಕ್ರಮಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

### ಜಿಟಿಟಿಸಿ: ಡಿಪ್ಲೋಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಿಂದ 2024–25ನೇ ಸಾಲಿಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗಾಗಿ ಡಿಪ್ಲೋಮಾ ಕೋರ್ಸುಗಳಿಗೆ ಆಫ್‌ಲೈನ್ ಮುಖಾಂತರ ಅರ್ಜಿ ಸಲ್ಲಿಕೆ ಅವಧಿಯನ್ನು ಜುಲೈ 31ರವರೆಗೆ ವಿಸ್ತರಿಸಲಾಗಿದೆ.

ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ 3+1 ಅವಧಿಯ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಹಾಗೂ ಡಿಪ್ಲೋಮಾ ಇನ್ ಮೆಕ್ಯಾಟ್ರಾನಿಕ್ಸ್ (ಡಿಎಂಸಿಹೆಚ್) ಮೇರೆಗೆ ಪ್ರವೇಶಾತಿ ಪ್ರಕ್ರಿಯೆಯನ್ನು ಜಿಟಿಟಿಸಿ ಕೇಂದ್ರದಲ್ಲಿ ಆರಂಭಿಸಲಾಗಿದೆ. ಆಸಕ್ತರು ಸರಕಾರಿ ಉಪಕರಣಾಗಾರ ಮತ್ತು ತರ ಬೇತಿ ಕೇಂದ್ರ, ಗದಗ ರೋಡ್ ದದೇಗಲ್, ಕೊಪ್ಪಳ ಇಲ್ಲಿ ಖುದ್ದಾಗಿ ಬಂದು ಅರ್ಜಿಯನ್ನು ಭರ್ತಿ ಮಾಡಿ ಜುಲೈ 31ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯ ಮೌನೇಶ್, ವಿಭಾಗದಮುಖ್ಯಸ್ಥ ದೂ.ಸಂ: 750704445, 9986088894 ಗೆ ಸಂಪರ್ಕಿಸಿ.

# ಅಂಗನವಾಡಿಗಳ ಲೋಪದೋಷ ಸರಿಪಡಿಸಿ ಮಕ್ಕಳಿಗೆ ಅಗತ್ಯ ಸೌಕರ್ಯ ಕಲ್ಪಿಸಿ

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಸೂಚನೆ



**■ ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ವಿವಿಧೆಡೆಯಲ್ಲಿ ಪ್ರವಾಸ ಕೈಗೊಂಡ ವೇಳೆಯಲ್ಲಿ ಕೆಲವು ಅಂಗನವಾಡಿಗಳಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿ ಮಕ್ಕಳಿಗೆ ಕಲ್ಪಿಸಬೇಕಾದ ಮೂಲ ಸೌಕರ್ಯದ ವಿಷಯದಲ್ಲಿ ಲೋಪದೋಷಗಳು ಕಂಡು ಬಂದಿದ್ದು, ಸಂಬಂಧಿ ಸಿದ ವಿವಿಧ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಅಗತ್ಯ ಕ್ರಮವಹಿಸಿ ಜವಾಬ್ದಾರಿಯುತವಾಗಿ ಕಾರ್ಯ ಪ್ರವೃತ್ತರಾಗಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಸೂಚಿಸಿದರು.


ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಹಾಗೂ ಮಕ್ಕಳ ಪಾಲನಾ ಸಂಸ್ಥೆ, ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಕುರಿತು ಭಾಗಿದಾರರೊಂದಿಗೆ ಜಿಲ್ಲಾಧಿಕಾರಿಗಳ ಆಡಿಟೋರಿಯಂ ಹಾಲ್‌ನಲ್ಲಿ ಜುಲೈ 12 ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೆಲವು ಶಾಲೆಗಳು ಮತ್ತು ವಸತಿ ನಿಲಯಗಳಲ್ಲಿ ಅಗತ್ಯ ಮೂಲಸೌಕರ್ಯ ಒದಗಿಸಲು ಉಂಟಾಗುತ್ತಿರುವ ವಿಳಂಬಕ್ಕೆ ಕಾರಣ ಏನು ಎಂಬುದರ ಬಗ್ಗೆ ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದಕೊಂಡ ಸದಸ್ಯರು, ಅಧಿಕಾರಿಗಳು ಕಾಲಕಾಲಕ್ಕೆ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಸರಿಪಡಿಸಬೇಕು ಎಂದು ನಿರ್ದೇಶನ ನೀಡಿದರು.

ರಾಜ್ಯದ್ಯಂತ ಎಲ್ಲ ಕಡೆಗಳಲ್ಲಿ ಡೆಂಗೆ ಪ್ರಕರಣಗಳು ಹೆಚ್ಚುತ್ತಿವೆ. ಈ ನಿಟ್ಟಿನಲ್ಲಿ ಮಕ್ಕಳು ಮಾರಕ ಡೆಂಗೆಗೆ ಬಲಿಯಾಗದಂತೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು. ಶಾಲೆ, ಅಂಗನವಾಡಿ ಸೇರಿದಂತೆ ಎಲ್ಲಾ ಕಡೆಗೆ ಶುಚಿತ್ವದ ಬಗ್ಗೆ ಸಾಕಷ್ಟು ಗಮನ ಹರಿಸಬೇಕು. ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ತಾಲೂಕು ಆರೋಗ್ಯ ಅಧಿಕಾರಿಗಳಿಂದ ಕಾಲಕಾಲಕ್ಕೆ ವರದಿ ಪಡೆದು ಸೂಕ್ತ ಮೇಲ್ವಿಚಾರಣೆ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಶಾ, ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಶ್ವೇತಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡೊಂಬರಮತ್ತೂರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ ಉಣ್ಕಿ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಬೇಡಿಕೆಗಳ ಈಡೇರಿಕೆಗಾಗಿ ಧರಣಿ



**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಎಲ್ಲಾ ದೇವದಾಸಿ ಮಹಿಳೆಯರ ವಿವಿಧ ಬೇಡಿಕೆಗಳನ್ನು ಕೂಡಲೆ ಈಡೇರಿಸಬೇಕು, ನಿರ್ಲಕ್ಷ್ಯ ವಹಿಸಿ ದರೆ ಜಿಲ್ಲಾ ಮಟ್ಟದಲ್ಲಿ ಹೋರಾಟ ಕೈಗೊಳ್ಳಲಾ ಗುವುದು ಎಂದು ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಕಾರ್ಯದರ್ಶಿ ಪಿ.ಚಾಂದಬೀ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತಾಲೂಕು ಆಡಳಿತ ಕಚೇರಿಯ ಆವರಣದಲ್ಲಿ ಜು.1ರಿಂದ ಜು.15 ರವರೆಗೆ ಹಮ್ಮಿ ಕೊಂಡಿದ್ದ ಅನಿರ್ದಿಷ್ಠ ಧರಣಿಯ 12ನೇ ದಿನವಾದ ಶುಕ್ರವಾರದಂದು ನೇತೃತ್ವ ವಹಿಸಿ ಅವರು ಮಾತನಾಡಿದರು. ಎಲ್ಲಾ ದೇವದಾಸಿ ಮಹಿಳೆಯರ ಜೀವನ ನಿರ್ವಹಣೆಗೆ ತಲಾ 5ಎಕರೆ ಭೂಮಿಯನ್ನು ನೀಡಬೇಕು. ಕೈಬಿಟ್ಟು ಹೋಗಿರುವ ದೇವದಾಸಿ ಮಹಿಳೆಯರ ಮತ್ತು ಅವರ ಮಕ್ಕಳ ಸರ್ವೆಕಾರ್ಯ ಪೂರ್ಣಗೊಳ್ಳಬೇಕು. ಇದರೊಂದಿಗೆ ಆ ಮಕ್ಕಳಿಗೆ ವಿವಿಧ ಇಲಾಖೆಗಳಲ್ಲಿ ಅರ್ಹತೆಗೆ ತಕ್ಕಂತೆ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು. ಅಲ್ಲದೆ ಇಲ್ಲಿಯವರೆಗೂ ತಾಲೂಕು ಆಡಳಿತಾಧಿಕಾರಿ ತಹಸೀಲ್ದಾರ್ ನಮ್ಮೊಂದಿಗೆ ಮಾತನಾಡಲು ಕರೆಯದೇ ನಿರ್ಲಕ್ಷಿಸುತ್ತಿದ್ದಾರೆ.

> ಬಲವಂತದಿಂದ ದೇವದಾಸಿ ಪದ್ಧತಿಗೆ ಒಳಗಾದ ದೇವದಾಸಿ ಮಹಿಳೆಯರು ರಾಜ್ಯಾಧ್ಯಂತ ಸಂಘಟನೆಯ ಮೂಲಕ, ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಸರ್ಕಾರ ಇಲ್ಲಿಯವರೆಗೂ ಸ್ಪಂದಿ ಸಿಲ್ಲ. ತುಳಿತಕ್ಕೊಳಗಾದ ಮಹಿಳೆಯರ ಬೇಡಿಕೆ ಗಳನ್ನು ಈಡೇರಿಸಬೇಕು.
>
> **– ಬಿ.ಮಾಳಮ್ಮ**
> ರಾಜ್ಯ ಪ್ರಧಾನ ಕಾರ್ಯದರ್ಶಿ

ಒಂದು ವೇಳೆ ನಾವು ಕೊಟ್ಟ ಸಮಯ ಮುಗಿದರೆ, ಜಿಲ್ಲಾ ಹಂತದಲ್ಲಿ ಹೋರಾಟ ಮುಂದುವರೆಸುತ್ತೇವೆ ಎಂದು ಎಚ್ಚರಿಸಿದರು.

ಉಪಾಧ್ಯಕ್ಷೆ ತಟ್ನಮ್ಮ ಮಾತನಾಡಿ, ಕಳೆದ 2017ರಿಂದ 2023ರವರೆಗೆ ಆಯ್ಕೆಯಾದ ದೇವದಾಸಿ ಮಹಿಳೆಯರಿಗೆ ಮನೆ ಕಟ್ಟಿಕೊಳ್ಳಲು ಆದೇಶ ಪತ್ರವನ್ನು ನೀಡಬೇಕು. ಈಗ ನೀಡುತ್ತಿರುವ ಮಾಸಿಕ ಧನ ಸಹಾಯಕ್ಕೆ ಹೆಚ್ಚುವರಿಯಾಗಿ 500 ರೂ.ಗಳನ್ನು ಸರ್ಕಾರದ ಆದೇಶ ಇದ್ದರೂ ಇಲ್ಲಿಯವರೆಗೂ ಕೊಟ್ಟಿಲ್ಲ, ಬಾಕಿ ಮೊತ್ತದೊಂದಿಗೆ ಕೂಡಲೆ ಹೆಚ್ಚುವರಿ ಮೊತ್ತವನ್ನು ನೀಡಬೇಕು. ಕೆಲ ಮಹಿಳೆಯವರು ಗಂಗಾ ಕಲ್ಯಾಣ ಯೋಜನೆಗೆ ಅರ್ಜಿಹಾಕಿದ್ದು ಕೂಡಲೆ ಮಂಜೂರು ಮಾಡಬೇಕು, ಜೊತೆಗೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಧರಣಿಯಲ್ಲಿ ತಾಲೂಕು ಅಧ್ಯಕ್ಷೆ ಬಿ.ಮೈಲಮ್ಮ, ಉಪಾಧ್ಯಕ್ಷರಾದ ಕೆ.ಅಂಜಿನಮ್ಮ, ನೀಲಮ್ಮ, ದೊಡ್ಡಬಸಮ್ಮ, ತಿಮ್ಮಕ್ಕ, ಕಾರ್ಯದರ್ಶಿಗಳಾದ ಬಿ.ಜ್ಯೋತಿ, ಎಚ್.ಬಸಮ್ಮ, ದುರುಗಮ್ಮ, ಹುಲಗೆಮ್ಮ, ಸೋಮಕ್ಕ ಸೇರಿದಂತೆ ಪ್ರತಿನಿತ್ಯ ತಾಲೂಕಿನ ವಿವಿಧ ಗ್ರಾಮಗಳಿಂದ ತಲಾ ಒಂದೆರಡು ಗ್ರಾಮಗಳಂತೆ ಕಾರ್ಯಕರ್ತರು ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

# ರಥ ಕಟ್ಟುವ ಕಾರ್ಯಕ್ಕೆ ಚಾಲನೆ



**■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದ ಆರಾಧ್ಯ ದೈವಗಳಾದ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀ ಆಂಜನೇಸ್ವಾಮಿಗಳ ಜೋಡುರಥಗಳ ಪೈಕಿ ಶ್ರೀಲಕ್ಷ್ಮೀನಾರಾಯಣಸ್ವಾಮಿಯ ರಥ ಕಟ್ಟುವ ಕಾರ್ಯ ಶುಕ್ರವಾರ ಆರಂಭಗೊಂಡಿದೆ.

ಈ ಸಂಧರ್ಭದಲ್ಲಿ ದೇಚಸ್ಥಾನ ಅಭಿವೃದ್ಧಿ ಸಮಿತಿ ಸದಸ್ಯ ಚಿದ್ರಿಸತೀಶ್ ಮಾತನಾಡಿ, ಶ್ರೀಲಕ್ಷ್ಮೀನಾರಾಯಣಸ್ವಾಮಿಯ ರಥದ ಎತ್ತರ 32 ಅಡಿಗಳಷ್ಟು ಎತ್ತರವಾಗಿ, ಇದಕ್ಕೆ ಸುಮಾರು 2 ಕೋಟಿರೂ. ಗಳ ವೆಚ್ಚ ತಗುಲಿದೆ, ಈ ರಥದ ಪೂರ್ಣ ವೆಚ್ಚವನ್ನು ಗಣಿ ಉದ್ಯಮಿ ಶಾಮರಾಜಸಿಂಗ್ ವಹಿಸಿದ್ದಾರೆ. ಈಗ ಈ ರಥದ ಗಡ್ಡೆಪೂಜೆಯೊಂದಿಗೆ ಇಂದು ರಥಕಟ್ಟುವ ಕಾರ್ಯ ಆರಂಭಗೊಂಡಿದೆ. ಇನ್ನು ಶ್ರೀಆಂಜನೇಸ್ವಾಮಿಯ ರಥಕಟ್ಟುಕಾರ್ಯ ಅಕ್ಟೋಬರ್‌ನಲ್ಲಿ ಆರಂಭಗೊಳ್ಳಲಿದೆ, ಈ ರಥಕ್ಕೆ ಗಣಿ ಉದ್ಯಮಿ ಜಯರಾಜ್‌ಸಿಂಗ್ 50ಲಕ್ಷರೂ. ಗಳನ್ನು ದೇಣಿಗೆ ನೀಡಿದ್ದಾರೆ. ಈ ರಥದ ಚಕ್ರಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿವೆ, ಇದರ ಎತ್ತರ 28 ಅಡಿಗಳಾಗಲಿದ್ದು, ಇದಕ್ಕೆ ಸುಮಾರು 1.75 ಕೋಟಿರೂ.ಗಳ ವೆಚ್ಚವಾಗಲಿದೆ, ಎರಡು ರಥಗಳು ಫೆಬ್ರವರಿಗೆ ಸಂಪೂರ್ಣವಾಗಿ ಸಿದ್ಧಗೊಳ್ಳಲಿವೆ ಎಂದರು. ಈ ಸಂಧರ್ಭದಲ್ಲಿ ರಥದ ಶಿಲ್ಪಿ ರಾಜಶೇಖರಹೆಬ್ಬಾರ, ಸಮಿತಿಯ ಗೋವಿಂದರ ಪರಶುರಾಮ, ತಳವಾರ ದೊಡ್ಡರಾಮಣ್ಣ, ಎನ್.ಶ್ರೀನಿವಾಸ ಶೆಟ್ಟಿ,ಡಿ.ರಾಘವೇಂದ್ರ ಶೆಟ್ಟಿ, ಎಲ್.ಪರಮೇಶ್ವರಪ್ಪ, ಎಲೆಗಾರ ಮಂಜುನಾಥ, ಡಾ.ಈ.ಎರಿಸ್ವಾಮಿ, ಕೆ.ರಘುವೀರ್, ಚುಕ್ಕಿನಾಗೇಶ್, ದೊಡ್ಡ ಮಂಜುನಾಥ, ತಳವಾರ ಹುಲುಗಪ್ಪ, ಬುಳ್ಳಿರಾಮಣ್ಣ, ಸಣ್ಣದುರುಗಪ್ಪ ಸೇರಿದಂತೆ ಇತರರಿದ್ದರು.

# ಡೇಂಘಿ ರೋಗ ಹರಡದಂತೆ ಜನರಲ್ಲಿ ಜಾಗೃತಿ ಮೂಡಿಸಿ



**■ ಹಂಪಿ ಟೈಮ್ಸ್ ಕೊಟ್ಟೂರು**

ಡೇಂಘಿ, ಚಿಕನ್ ಗುನ್ಯಾ ದಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಎ.ನಸರುಲ್ಲಾ ಅವರ ನೇತೃತ್ವದಲ್ಲಿ ಹೋಟೆಲ್ ಗಳಲ್ಲಿ ಸ್ವಚ್ಚತೆ ಕಾಪಾಡಿಕೊಳ್ಳುವಂತೆ ಹಾಗೂ ಗ್ರಾಹಕರಿಗೆ ಶುದ್ದ ಕುಡಿಯುವ ನೀರು ಒದಗಿಸುವಂತೆ, ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿ ಜಾಥ ಮೂಲಕ ಜಾಗೃತಿ ಮೂಡಿಸಲಾಯಿತು.

ಜಾಥವು ಸರ್ಕಾರಿ ಬಾಲಕರ ಪ್ರೌಢಶಾಲೆಯಿಂದ ಉಜ್ಜಿನಿ ಸರ್ಕಲ್, ರೇಣುಕಾ ಟಾಕೀಸ್ ರಸ್ತೆ ಹಾಗೂ ಸಂತೆಮಾರ್ಕೆಟ್ ಮೂಲಕ ಬಸ್ ನಿಲ್ದಾಣ,ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಕೈಗೊಂಡರು. ಜಾಥದಲ್ಲಿ ಶಾಲಾ ಮಕ್ಕಳು, ಆರೋಗ್ಯ ಇಲಾಖೆ ಹಾಗೂ ಪಟ್ಟಣ ಪಂಚಾಯತಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಈ ವೇಳೆ ಪಟ್ಟಣ ಪಂಚಾಯತಿ ಆರೋಗ್ಯ ಅಧಿಕಾರಿ ಅನುಷಾ, ಪಪಂ ಕಂದಾಯ ಅಧಿಕಾರಿ ಕೊಟ್ರೇಶ್, ಸಿಬ್ಬಂದಿ ಪರುಶಪ್ಪ, ವಿಜಯಕುಮಾರ್, ಸುಮಕ್ಕ,ರಾಧಮ್ಮ, ಸೇರಿದಂತೆ ಅನೇಕರು ಹಾಜರಿದ್ದರು.

SSLC ಹಂಪಿ ಟೈಮ್ಸ್
ಮಾರ್ಗದರ್ಶಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ತಂಬಾಕು ದುಷ್ಪರಿಣಾಮದ ಅರಿವು ಮೂಡಿಸಿ

## ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಹೇಳಿಕೆ | ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆ




**■ ಹಂಪಿ ಟೈಮ್ಸ್ ಬಳ್ಳಾರಿ**

ತಂಬಾಕು ಉತ್ಪನ್ನಗಳ ಬಳಕೆಯಿಂದಾಗುವ ದುಷ್ಪರಿಣಾಮ ಕುರಿತು ಸಾರ್ವಜನಿಕ ವಲಯದಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಸಹಕಾರವೂ ಅಗತ್ಯವಿದೆ ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ತಿಳಿಸಿದರು.

ನಗರದ ಹೊಸ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಂಗಡಿ, ಹೋಟಲ್, ಬೇಕರಿ, ಲಾಡ್ಜ್, ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ಇತರೇ ವಾಣಿಜ್ಯ ಮಳಿಗೆಗಳಲ್ಲಿ ಕಡ್ಡಾಯವಾಗಿ ಕೋಟ್ಪಾ ಕಾಯ್ದೆಗೆ ಸಂಬಂಧಿಸಿದ ನಾಮಫಲಕಗಳನ್ನು ಹಾಕಬೇಕು. ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು. ನಾಮಫಲಕ ಹಾಕದ ಅಂಗಡಿಗಳಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 1308 ಶಾಲೆಗಳಲ್ಲಿ 1267 ಶಾಲೆಗಳನ್ನು ತಂಬಾಕು ಮುಕ್ತ ಶಾಲೆಗಳನ್ನಾಗಿ ಘೋಷಣೆ ಮಾಡಲಾಗಿದ್ದು, ಬಾಕಿ ಉಳಿದ 41 ಶಾಲೆಗಳನ್ನು ತಂಬಾಕು ಮುಕ್ತ ಶಾಲೆಗಳಾಗಿ ಘೋಷಿಸಲಾಗುವುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿದರು.

ಜಿಲ್ಲೆಯ 75 ಪದವಿ ಪೂರ್ವ ಕಾಲೇಜುಗಳ ಪೈಕಿ 62 ಕಾಲೇಜುಗಳಲ್ಲಿ ಸೆಕ್ಷನ್–4 ಮತ್ತು ಸೆಕ್ಷನ್–6ಬಿ ನಾಮಫಲಕಗಳು ಅಳವಡಿಸಲಾಗಿದ್ದು, ಬಾಕಿ ಉಳಿದ ಕಾಲೇಜುಗಳಲ್ಲಿ ಈ ಕೂಡಲೇ ನಾಮಫಲಕ ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳು, ಡಿಡಿಪಿಯು ಅವರಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಆಹಾರ ಮಾರಾಟಕ್ಕೆ ಸಂಬಂಧಿಸಿದಂತೆ 2093 ಪರವಾನಿಗೆ ಪಡೆದ ಅಂಗಡಿ, ಬೇಕರಿ, ಹೋಟೆಲ್‌ಗಳಿದ್ದು, ಅವುಗಳಲ್ಲಿ 1407 ಸೆಕ್ಷನ್ 4 ನಾಮಫಲಕ ಅಳವಡಿಸಲಾಗಿದೆ ಹಾಗೂ ಬಾಕಿ ಉಳಿದ 686 ಸ್ಥಳಗಳಲ್ಲಿ ನಾಮಫಲಕ ಅಳವಡಿಸಲಾಗುವುದು ಎಂದು ಆಹಾರ ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿರುವ ಎಲ್ಲಾ ಗ್ರಾಪಂಗಳಲ್ಲಿ ಹಾಗೂ ಗ್ರಾಮಗಳಲ್ಲಿ ತಂಬಾಕು ನಿಯಂತ್ರಣ ಸಮಿತಿಗಳನ್ನು ರಚಿಸಲಾಗಿದ್ದು, ನಿಮಮಾನುಸಾರ ಸಭೆ ನಡೆಸಿ ಕೋಟ್ಪಾ–2003ರ ಸೆಕ್ಷನ್ 4,5,6ಎ ಮತ್ತು 7ರ ಅನುಷ್ಠಾನಗೊಳಿಸಬೇಕು ಹಾಗೂ ಕಾರ್ಯಾಚರಣೆ ನಡೆಸಿ ದಂಡ ಸಂಗ್ರಹಿಸುವಂತೆ ಅವರು ಸೂಚಿಸಿದರು.

ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆ ಹೆಚ್ಚಾಗಿ ಕಂಡುಬರುತ್ತಿದ್ದು, ಕಡಿವಾಣ ಹಾಕಬೇಕು ಮತ್ತು ದಂಡ ವಿಧಿಸಬೇಕು ಎಂದು ಕೆಕೆಆರ್‌ಟಿಸಿ ನಿಗಮದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ವಾಹನಗಳ ಮೈಕ್ ಮೂಲಕ ತಂಬಾಕು ಉತ್ಪನ್ನಗಳ ಬಳಕೆಯಿಂದಾಗುವ ಪರಿಣಾಮ ಕುರಿತು 2 ನಿಮಿಷಗಳ ಜಿಂಗಲ್ ಮೂಲಕ ಪ್ರಚಾರ ನೀಡಬೇಕು ಎಂದು ತಿಳಿಸಿದರು.

ಕೋಟ್ಪಾ ಕಾಯ್ದೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್‌ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಎನ್.ಬಸರೆಡ್ಡಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಂಗನವಾಡಿ ಮಕ್ಕಳ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ



**■ ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ನಗರದ ಗೌರಿ ಅಂಗಳ, ತೋಟದ ಬಾವಿ ಬ್ರಹ್ಮನವಾಡಿ ಅಂಗನವಾಡಿ ಕೇಂದ್ರದಲ್ಲಿ ಜುಲೈ 10 ರಂದು ಮಕ್ಕಳಿಗೆ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ತಾಯಂದಿಯರಿಗೆ, ಪೋಷಕರಿಗೆ ಶಾಲಾಪೂರ್ವ ಶಿಕ್ಷಣದ ಮಹತ್ವ ಕುರಿತು, ಮಗುವನ್ನು ಶಾಲೆಗೆ ಪ್ರತಿದಿನ ಕಳಿಸುವುದರ ಕುರಿತು ಹಾಗೂ ಮಕ್ಕಳ ಆರೋಗ್ಯದ ಕುರಿತು ಕಾಳಜಿ ವಹಿಸುವಂತೆ ತಿಳಿಸಲಾಯಿತು. ಬಳಿಕ ಇಲಾಖೆಯಿಂದ ವಾರ್ಡಿನ ಸದಸ್ಯರಿಗೆ ಅಭಿನಂದನಾ ಪತ್ರ ಕೊಟ್ಟು ಗೌರವಿಸಲಾಯಿತು. ಮಕ್ಕಳಿಗೆ ಸನಗರಸಭೆಯ ವಾರ್ಡಿನ ಸದಸ್ಯರು ಪುಸ್ತಕ ಮತ್ತು ಪೆನ್ನುಗಳನ್ನು ವಿತರಿಸಿದರು.

ಈ ಸಂಧರ್ಭದಲ್ಲಿ ಜಿಲ್ಲಾ ನಿರೂಪಣಾಧಿಕಾರಿಗಳಾದ ಗಂಗಪ್ಪ, ಮಹಿಳಾ ಅಭಿವೃದ್ಧಿ ಅಧಿಕಾರಿಗಳಾದ ಅನ್ನಪೂರ್ಣ, ಶಾಲಾ ಶಿಕ್ಷಕಿಯರಾದ ರೇಣುಕಾ, ಕಲಿಕಾ ಟಾಟಾ ಟ್ರಸ್ಟ್‌ನ ಜಿಲ್ಲಾ ವ್ಯವಸ್ಥಾಪಕರಾದ ಅಶೋಕ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಸಿದ್ದಪ್ಪ ಕುರಿ, ವಲಯ ಹಿರಿಯ ಮೇಲ್ವಿಚಾರಕಿಯರಾದ ಭುವನೇಶ್ವರಿ ಸೇರಿದಂತೆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಮಕ್ಕಳು, ಮಕ್ಕಳ ಪೋಷಕರು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA